ಕರ್ನಾಟಕ ಸರ್ಕಾರ

ಕನ್ನಡ ಕಟ್ಟಿದವರು ಮಾಲೆ



# ಕಾ. ಹು. ಬಿಜಾಪುರ

## ಡಾ. ಅರ್ಜುನ ಗೊಳಸಂಗಿ

ಕನ್ನಡ ಪುಸ್ತಕ ಪ್ರಾಧಿಕಾರ

ಕಾ. ಹ. ಬಿಜಾಪೂರ

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ಧಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

# ಕಾ. ಹು. ಬಿಜಾಪೂರ

ಡಾ. ಅರ್ಜುನ ಗೊಳಸಂಗಿ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

**KA. HU. BIJAPUR** A Monograph on Ka.Hu. Bijapur in kannada Written by Dr. Arjun Golasangi Published By ***B.H Mallikarjun***, Administrative Officer, Kannada Pustaka Pradhikara, Kannada Bhavana, J.C.Road, Bengaluru -560002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2011
Pages : xiv + 51
Copies : 1000
Price : ₹ 40

ಮೊದಲ ಮುದ್ರಣ : ೨೦೧೧
ಪುಟಗಳು : xiv + ೫೧
ಪ್ರತಿಗಳು : ೧೦೦೦
ಬೆಲೆ : ₹ ೪೦

ಕರಡು ತಿದ್ದಿದವರು : ಲೇಖಕರು

ಪ್ರಕಾಶಕರು:
**ಬಿ.ಎಚ್.ಮಲ್ಲಿಕಾರ್ಜುನ**
ಆಡಳಿತಾಧಿಕಾರಿಗಳು
**ಕನ್ನಡ ಪುಸ್ತಕ ಪ್ರಾಧಿಕಾರ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು-೫೬೦ ೦೦೨

ಮುದ್ರಕರು:
**ಮೆ॥ ಪ್ರಿಂಟ್ ಪಾರ್ಕ್**
೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,
ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧
ದೂ : ೦೮೦-೨೩೪೨೨೮೩೮

# ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

**ಡಾ. ಸಿದ್ಧಲಿಂಗಯ್ಯ**

ಸಂಪಾದಕರು

**ಡಾ. ಕರೀಗೌಡ ಬೀಚನಹಳ್ಳಿ**

ಸಂಪಾದಕ ಮಂಡಳಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**

**ಶ್ರೀ ಹೊರೆಯಾಲ ದೊರೆಸ್ವಾಮಿ**

**ಪ್ರೊ. ಸುಕನ್ಯಾ ಮಾರುತಿ**

**ಡಾ. ಎಚ್. ಟಿ. ಪೋತೆ**

**ಶ್ರೀ ಪ್ರಕಾಶ್ ಕಂಬತ್ತಳ್ಳಿ**

**ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ**

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ 'ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು. ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ,

ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)
ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ 'ಸಂಪಾದಕ ಸಮಿತಿ'ಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯ ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ–ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ–ಪ್ರಭಾವಗಳು, ಭಾಗವಹಿಸಿದ ಚಳುವಳಿ–ಹೋರಾಟಗಳು, ಸಂಘಟನೆಗಳು, ನಾಡು–ನುಡಿ–ಸಾಹಿತ್ಯ–ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ–ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಿಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು

ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ, ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ವಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೩೫ ಮಾತ್ರ. ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚೆಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು–ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ

ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ–ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ
ಸಂಪಾದಕ

# ಲೇಖಕರ ನುಡಿ

ಉತ್ತರ ಕರ್ನಾಟಕದ ಯಾವುದೇ ಜಿಲ್ಲೆಯಲ್ಲಿ ಕನ್ನಡ ಸಾಹಿತ್ಯ, ಜನಪದ ಸಾಹಿತ್ಯ, ಸಂಸ್ಕೃತಿ, ಕಲೆಯ ಕಾರ್ಯಕ್ರಮ ಇದೆ ಎಂದರೆ ಸಾಕು, ಅಲ್ಲಿ ಕಾ.ಹು. ಬಿಜಾಪೂರ ಇರಲೇಬೇಕು. ಕಾ.ಹು. ಅವರಿಗೆ ಸಾಹಿತ್ಯ, ಸಂಸ್ಕೃತಿ ಎಂದರೆ ಅಷ್ಟು ಪ್ರೀತಿ, ಅಭಿಮಾನ. ಜಾಗತೀಕರಣದ ಸಂದರ್ಭದಲ್ಲೂ ಗ್ರಾಮೀಣ ಪರಿಸರದಲ್ಲಿ ಕಲೆ, ಸಾಹಿತ್ಯ, ಸಾಂಸ್ಕೃತಿಕ ಪರಿಸರ ಉಳಿದಿದೆ ಎಂದರೆ, ಅದು ಇಂತಹ ವ್ಯಕ್ತಿಗಳಿಂದ ಮಾತ್ರ ಎನ್ನಬೇಕು. ಸದಾ ಅದೇ ಧ್ಯಾನ–ಉಸಿರು. ಹೀಗಾಗಿ ಕಾ.ಹು. ಅವರನ್ನು 'ಗ್ರಾಮೀಣ ಸಂಸ್ಕೃತಿಯ ಜೀವಾಳ' ಎಂದು ಕರೆಯಬಹುದಾಗಿದೆ.

ಕಳೆದ ಅರ್ಧ ಶತಮಾನದಿಂದಲೂ ನಿರಂತರವಾಗಿ ಕಲೆ, ಸಾಹಿತ್ಯ, ಸಂಸ್ಕೃತಿಯ ಸಂಗಮ, ಚೈತನ್ಯಯುತವಾಗಿ ಕೆಲಸ ಮಾಡುತ್ತ ಬಂದಿರುವ ಕಾ.ಹು. ಅವರು, 'ಭಾವೈಕ್ಯತೆಯ ಬಂಧು' ವಾಗಿ ಜೀವನದುದ್ದಕ್ಕೂ ದುಡಿದವರು. ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿ ಗ್ರಾಮದ ಕಾ.ಹು. ಬಿಜಾಪೂರ ಚಿಂತನಶೀಲ ವ್ಯಕ್ತಿ ಎಂಬುದರಲ್ಲಿ ಎರಡು ಮಾತಿಲ್ಲ. 'ಸ್ವಧರ್ಮ ಪ್ರೀತಿಸು, ಪರಧರ್ಮ ಗೌರವಿಸು' ಎನ್ನುವ ಮನೋಭಾವದವರು. ಪ್ರಗತಿಪರ ರೈತರಾಗಿ, ಪತ್ರಿಕಾ ವರದಿಗಾರರಾಗಿ, ಸಾಹಿತಿಯಾಗಿ, ಸಂಘಟಿಕರಾಗಿ ಹಲವಾರು ಕ್ಷೇತ್ರಗಳಲ್ಲಿ ತಮ್ಮನ್ನು ತಾವು ಸಮರ್ಪಿಸಿಕೊಂಡವರು. ಜೀವ ಮಹಾನದಿಯಾಗಬೇಕು. ಎಲ್ಲರೂ ಈಜಿ ದಡ ಸೇರಬೇಕೆಂಬ ಸದಾಶಯುವುಳ್ಳವರು.

ಕ್ರಿಯಾಶೀಲತೆಗೆ, ಸೌಜನ್ಯಕ್ಕೆ ಇನ್ನೊಂದು ಹೆಸರೆಂದರೆ ಕಾ.ಹು. ಅವರೆನ್ನಬೇಕು. ಸರಳ, ನೇರ ನಡೆ–ನುಡಿಯ ಆಕರ್ಷಕ ವ್ಯಕ್ತಿತ್ವವನ್ನು ಹೊಂದಿದವರು. ದಿಟ್ಟ ಸ್ವಭಾವ ಹೊಂದಿದ ಇವರು ಏನೇ ಬರಲಿ, ಇರಲಿ ಮನುಕುಲಕ್ಕೆ ಒಳಿತಾಗುವ ಗ್ರಾಮಾಭಿವೃದ್ಧಿಗೆ ಹಿತವೆಂದೆನಿಸಿದರೆ ಬಿಡದ ಛಲಗಾರ, ಇವರು ಬಹುಮುಖಿ ಪ್ರತಿಭಾವಂತರೂ ಸಹೃದಯಿಗಳೂ ಆದ ಗ್ರಾಮಚೈತನ್ಯದ ಕಾಹು ಬಿಜಾಪೂರ, ಅವರ ಜೀವನ ಕಥನ ಬಿಂಬಿಸುವ ಕೃತಿಯೊಂದನ್ನು ಬರೆಯಬೇಕೆಂಬ ಸಂಕಲ್ಪ ನನ್ನಲ್ಲಿತ್ತು. ಅದೀಗ ಸಂಪೂರ್ಣಗೊಂಡು 'ಸಾರ್ಥಕ ಬದುಕಿನ ಸಂತ; ಕಾ.ಹು. ಬಿಜಾಪೂರ' ಎಂಬ ವ್ಯಕ್ತಿಚಿತ್ರಣ ಕೃತಿ ತಮ್ಮ ಮುಂದಿದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ವ್ಯಕ್ತಿ ಚಿತ್ರಣ ಆರಂಭವಾದದ್ದೇ ಸಿದ್ಧವನಹಳ್ಳಿ ಕೃಷ್ಣಶರ್ಮ ಅವರಿಂದ, ಅವರ 'ಕುಲ ದೀಪಕರು', ದೀಪಮಾಲೆ' ಕೃತಿಯಿಂದ ಎಚ್ಚೆಸ್ಕೆ, ಹಾಮಾನಾ ಮೊದಲಾದ ಲೇಖಕರಿಂದ ತುಂಬಾ ಜನಪ್ರಿಯಗೊಂಡಿತು.

ಗದುಗಿನ ಶ್ರೀ ತೋಂಟದಾರ್ಯ ಸಂಸ್ಥಾನ ಮಠದ ಲಿಂಗಾಯತ ಅಧ್ಯಯನ ಸಂಸ್ಥೆಯ ಪ್ರಕಟಣೆಯಂತೂ ಸರಣಿಯಾಗಿ ಪ್ರಕಟಗೊಂಡಿವೆ. ಜೋಳದರಾಶಿ ದೊಡ್ಡನಗೌಡರು, ಗೌರಮ್ಮ ಚಲವಾದಿ, ಬಿ.ಡಿ. ಜತ್ತಿ, ಸಿಂಪಿ ಲಿಂಗಣ್ಣ, ಎಂ. ಎ. ಚೆಟ್ಟಿ, ಟಿ.ಪಿ. ಅಕ್ಕಿ ಮೊದಲಾದ ಕೃತಿಗಳು ವ್ಯಕ್ತಿ ಚಿತ್ರಣ ಸಾಹಿತ್ಯದ ಮೈಲುಗಲ್ಲುಗಳು. ಜೀವನ ಚರಿತ್ರೆ ಸಾಹಿತ್ಯ ಇಂದು ತುಂಬಾ ಹುಲುಸಾಗಿ ಬೆಳೆದು ಬರುತ್ತಲಿದೆ. ಅದು ರಾಜಕೀಯ, ಸಾಮಾಜಿಕ, ಶೈಕ್ಷಣಿಕ, ಕೃಷಿ ಧಾರ್ಮಿಕ, ಕೈಗಾರಿಕೆ, ವ್ಯಾಪಾರೋದ್ಯಮ ಹೀಗೆ ಹತ್ತಾರು ಕ್ಷೇತ್ರದಲ್ಲಿ ದುಡಿದ ಗಣ್ಯರ ಬದುಕಿನ ಪುಟಗಳನ್ನು ಈ ಸಾಹಿತ್ಯ ಕೃತಿಗಳು ಒಳಗೊಂಡಿವೆ. ಇತ್ತೀಚೆಗೆ ಬಂದ ಎಚ್. ಆರ್. ರಾಮಕೃಷ್ಣರಾವ್ ಅವರು ಬರೆದಿರುವ 'ಕಲಾಂ ಮೇಷ್ಟ್ರು' ಗ್ರಂಥವನ್ನು ಸಾಹಿತ್ಯ ಆಸಕ್ತರೆಲ್ಲರೂ ಓದಲೇಬೇಕಾದ ಪ್ರಮುಖ ಕೃತಿ. ಇಂತಹ ಜೀವನ ಚರಿತ್ರೆಯ ಕೃತಿಗಳು ಯುವ ಪೀಳಿಗೆಗೆ, ಮಕ್ಕಳಿಗೆ ಸಾಮಾನ್ಯತೆಯಿಂದ ಅಸಾಮಾನ್ಯತೆಯಡಿಗೆ ಸಾಗಿಹೋದ ಗಣ್ಯರ ಜೀವನಾದರ್ಶದ ಮೌಲ್ಯಗಳು ದಾರಿ ದೀಪವಾಗುತ್ತವೆ.

ಹಳ್ಳಿಯ ಸಾಮಾನ್ಯ ರೈತ ಕುಟುಂಬವೊಂದರಲ್ಲಿ ಹುಟ್ಟಿ ಬೆಳೆದ ಕಾಸೀಮಸಾಬ ಹುಸೇನಸಾಬ ಬಿಜಾಪೂರ ಅವರ ಬದುಕಿನ ಸಾಧನೆಯ ಹೆಜ್ಜೆಗಳನ್ನು ಸಾರ್ಥಕ ಬದುಕಿನ ಸಂತ –'ಕಾ.ಹು. ಬಿಜಾಪೂರ' ಗ್ರಂಥದಲ್ಲಿ ಪರಿಚಯಿಸುವ ಪ್ರಯತ್ನ ಮಾಡಲಾಗಿದೆ. ಈ ಕೃತಿಯನ್ನು ಬರೆಯುವದಕ್ಕೆ ಕಾ.ಹು. ಅವರ ಬದುಕು ನನಗೆಷ್ಟು ಪ್ರೇರಣೆ ನೀಡಿತೊ ಅಷ್ಟೇ ಪ್ರೇರಣೆಯನ್ನು ಪ್ರಾ. ಬಿ. ಎಂ. ತಳಗಡೆ, ಎಸ್.ಕೆ. ಚಿಕರಡ್ಡಿ, ಎಸ್.ಎಸ್. ಅಂಗಡಗೇರಿ, ಬಿ.ಎಂ. ಪಾಟೀಲ, ವಾಯ್. ಎಸ್. ಪಾಟೀಲ, ಸಿ.ಎಂ. ಜೋಶಿ, ಹ. ಮ. ಪೂಜಾರ, ಜಿ. ವಾಯ್. ಕೌಲಗಿ, ಡಾ. ಅಮಿರುದ್ದಿನ ಕಾಝಿ, ರ. ಸಿ. ಚಿಲಕಾಂತಮಠ ಅವರ ಲೇಖನಗಳಿಂದಲೂ ಪಡೆದಿರುವೆ. ಅವರಿಗೂ ಮತ್ತು ಕಾ.ಹು. ಬಿಜಾಪೂರ ಅವರ ಬಗೆಗೆ ಮಾಹಿತಿ ನೀಡಿದ ಅವರ ಅಭಿಮಾನಿಗಳಿಗೂ ಅಭಿನಂದನೆಗಳು. ಕಾ.ಹು. ಅವರ ಬದುಕಿನ ಸತ್ಯ–ಸತ್ವ ಸಂಗತಿಗಳನ್ನು ಚಿತ್ರಿಸುವ ಸಣ್ಣ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ. ಹಿರಿಯ ಚೇತನ ಕಾ.ಹು. ಅವರು ನನಗೆ ತೋರಿದ ಪ್ರೀತಿ, ಗೌರವಾಭಿಮಾನಕ್ಕೆ ನನ್ನ ಈ ಕಿರುಕಾಣಿಕೆ ಅವರ ವ್ಯಕ್ತಿ ಚಿತ್ರಣ ಕೃತಿ.

ಈ ಕೃತಿ ಬರೆಯಲು ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯವರಿಗೂ ಆಡಳಿತಾಧಿಕಾರಿ ಹಾಗೂ ಪ್ರಾಧಿಕಾರದ ಎಲ್ಲ ಸದಸ್ಯರಿಗೆ ಅಭಿನಂದನೆಗಳು.

**ಡಾ. ಅರ್ಜುನ ಗೊಳಸಂಗಿ**

# ಪರಿವಿಡಿ


(ಅ) ಪ್ರವೇಶ ೩–೧೮

೧. ಕೌಟುಂಬಿಕ ಪರಿಸರ
೨. ಸಾಮಾಜಿಕ ಪರಿಸರ
೩. ಶೈಕ್ಷಣಿಕ ಪರಿಸರ
೪. ಸಾಹಿತ್ಯಕ ಪರಿಸರ
೫. ಕನ್ನಡ ಪುಸ್ತಕ ಪ್ರೇಮ
೬. ಕನ್ನಡ ಪ್ರೇಮ
೭. ಗೆಳೆಯರ ಬಳಗದ ಸಂಸ್ಥಾಪಕ
೮. ಜಾನಪದ ಮಹಾಚೇತನ
೯. ಸಾಹಿತ್ಯ ಕೃಷಿ
೧೦. ಕೃಷಿ ಪರಿಸರ

(ಆ) ಸಂಘ ಸಂಸ್ಥೆಗಳ ಸಂಸ್ಥಾಪಕರು ೧೯–೨೩

೧. ಗ್ರಾಮ ಪಂಚಾಯತಿ ಸದಸ್ಯ
೨. ಇಸ್ಲಾಂ ಕಮಿಟಿಯ ಕಾರ್ಯದರ್ಶಿ
೩. ಯುವಕ ಮಂಡಳದ ಅಧ್ಯಕ್ಷ
೪. ಹಾಲಿನ ಡೇರಿಯ ಸಂಸ್ಥಾಪಕ
೫. ಅನುಭವ ಮಂಡಳದ ಅಧ್ಯಕ್ಷ
೬. ಸಾಹಿತ್ಯ ಸಾಂಸ್ಕೃತಿಕ ಸಮಾರಂಭಗಳ ಕೇಂದ್ರ ಬಿಂದು

(ಇ). ದಲಿತ ಬಂಧು ೨೪–೩೫

೧. ಹವ್ಯಾಸಿ ಪತ್ರಿಕಾ ವರದಿಗಾರ
೨. ಭಾವೈಕ್ಯದ ಬಂಧು
೩. ಸುವರ್ಣ ಸ್ವಾತಂತ್ರ್ಯ ಸಂಭ್ರಮದ ಸಂಚಾಲಕ
೪. ಪರೋಪಕಾರದ ಸಾಹಸ ಗಾಥೆ

೫. ಸಂದ ಪ್ರಶಸ್ತಿಗಳು
೬. ಸಮಾರೋಪ

(ಈ) ಅನುಬಂಧ ೩೬–೫೧

೧. ಕಾ.ಹು. ಅವರ ಬಗೆಗೆ ಗಣ್ಯರ ಅಭಿಪ್ರಾಯಗಳು
೨. ಕಾ.ಹು. ಅವರ ಆಯ್ದ ಕವಿತೆಗಳು
೩. ಕಾ.ಹು. ವಂಶಾವಳಿ
೪. ಕಾ.ಹು. ಭಾವಚಿತ್ರಗಳು

## ಅರ್ಪಣೆ

ಸಾಮರಸ್ಯದ ಹಣತೆಯಲಿ
ಭಾವೈಕ್ಯತೆಯ ಜ್ಯೋತಿ ಬೆಳಗಿಸುವ
ಹಾಗೂ
ಕನ್ನಡ ಪುಸ್ತಕ ಲೋಕವನ್ನು ಪ್ರೀತಿಸುವ
ಮನಸುಗಳಿಗೆ.

# ಸಾರ್ಥಕ ಬದುಕಿನ ಸಂತ
# ಕಾ. ಹು. ಬಿಜಾಪೂರ

ಪ್ರವೇಶ :

ಬಿಜಾಪೂರ ಐತಿಹಾಸಿಕವಾಗಿ ತುಂಬಾ ಪ್ರಾಚೀನತೆ ಹೊಂದಿರುವ ಜಿಲ್ಲೆಯಾಗಿದೆ. ಬಿಜಾಪೂರಕ್ಕೆ 'ವಿಜಯಪುರ' ಎಂಬ ಹೆಸರಿತ್ತು. (ಸಿಂದಗಿ ತಾ॥ ದೇವೂರಿನ ಶಾಸನ ೧೦೨೯) ಬಹುಶ: ಆಂಗ್ಲದ ಪ್ರಭಾವದಿಂದ ವಿಜಾಪುರವು ಬಿಜಾಪೂರ ಎಂದು ಎಂದು ರೂಢಿಗೆ ಬಂದಿರಬೇಕು. ಇಂತಹ ಬಿಜಾಪೂರ ಜಿಲ್ಲೆಯಲ್ಲಿ ೧೮೭೪ ರ ಸಂದರ್ಭದಲ್ಲಿಯೇ ಜನಪದ ಸಾಹಿತ್ಯ (ಲಾವಣಿ) ಸಂಗ್ರಹ ಕಾರ್ಯ ನಡೆದಿತ್ತು. ಇದು ಮೊದಲ ಹಂತ. ಎರಡನೆಯ ಹಂತದಲ್ಲಿ ಜನಪದ ಸಾಹಿತ್ಯ ಸಂಗ್ರಹ ಆರಂಭವಾದದ್ದು ಹಲಸಂಗಿ ಗೆಳೆಯರ ಗುಂಪಿನಿಂದ (೧೯೨೨) ಎನ್ನಬೇಕು. ಇಂತಹ ಜನಪದ ಸಾಹಿತ್ಯ ಪರಂಪರೆಯ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿ ಗ್ರಾಮದಲ್ಲಿ ಕಾ.ಹು. ಬಿಜಾಪೂರ ಅವರು ಜನಪದ ಸಾಹಿತ್ಯ ಸಂಗ್ರಹ –ಪ್ರಕಟನೆ ಕಾರ್ಯ ಆರಂಭ ಮಾಡಿದರು. ಗೊಳಸಂಗಿ ಗ್ರಾಮವೂ ಕೂಡಾ ಕ್ರಿ.ಶ. ೧೬೫೬ ಕ್ಕಿಂತ ಮೊದಲು ಔರಂಗಜೇಬನ ಆಡಳಿತಕ್ಕೆ (ಕ್ರಿ.ಶ. ೧೬೫೮–೧೬೦೬) ಒಳಪಟ್ಟಿತ್ತೆಂದು ತಿಳಿದು ಬರುತ್ತದೆ. ನಂತರ ಈ ಗ್ರಾಮ ಪಂಚಾಯತಿ ಆಡಳಿತ ಬರುವವರೆಗೆ ಜಹಗೀರದಾರರ (ಮುಸ್ಲಿಂ) ಆಡಳಿತಕ್ಕೆ ಒಳಪಟ್ಟಿತ್ತು.

ಬಿಜಾಪೂರ ಎಂದಾಕ್ಷಣ ನಮಗೆ ತಟ್ಟನೆ ನೆನೆಪಾಗುವುದು ಅಲ್ಲಿಯ ಬಿಸಿಲು–ಬರಗಾಲ. ಹಾಗೆಯೇ ಜಗತ್ ಪ್ರಸಿದ್ಧವಾದ ಗೋಳಗುಮ್ಮಟ. ಈ ಗೋಳ ಗುಮ್ಮಟದಂತೆ ಅನೇಕ ವ್ಯಕ್ತಿಗಳು ಇಲ್ಲಿ ಪ್ರಸಿದ್ಧರಾಗಿ ಹೋಗಿದ್ದಾರೆ. ವಚನ ಪರಿಸರ ರೂಪಿಸಿದ 'ವಚನ ಗುಮ್ಮಟ' ಎಂದೆನಿಸಿದ ಫ. ಗು. ಹಳಕಟ್ಟಿಯವರು. ಹಾಗೆಯೇ 'ಜಾನಪದ ಗುಮ್ಮಟ' ಎಂದು ಹೆಸರಿಸಬಹುದಾದ ಹಲಸಂಗಿ ಗೆಳೆಯರ ಗುಂಪು. ಆ ಗೆಳೆಯರ ಗುಂಪು ರೂಪಿಸಿದ ಜಾನಪದ ಪರಿಸರದಿಂದ ಸಾಹಿತಿಗಳು ಬೆಳಕಿಗೆ ಬಂದರು. ಅವರು ಕನ್ನಡ ಸಾಹಿತ್ಯವನ್ನು ಉಳಿಸಿ ಬೆಳೆಸಿದರು. ಅದರಿಂದ ಅವರೂ ಬೆಳೆದು ಬಂದರು.

'ಹಲಸಂಗಿ ಗೆಳೆಯರ ಗುಂಪಿ'ನಂತೆಯೇ 'ಗೊಳಸಂಗಿ ಗೆಳೆಯರ ಗುಂಪ'ನ್ನು ಕಟ್ಟಿಕೊಂಡು, ಪ್ರಗತಿಪರ ರೈತರೂ, ಸಮಾಜ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ ಚಿಂತಕರಾಗಿ ಹೊರ ಹೊಮ್ಮಿದವರೆಂದರೆ, ಕಾಸೀಮಸಾಬ ಹುಸೇನಸಾಬ ಬಿಜಾಪೂರ ಅವರು. ಬಿಜಾಪೂರ ಸಾಹಿತ್ಯ ಸಾಂಸ್ಕೃತಿಕ ಪರಿಸರದಲ್ಲಿ 'ಕಾ.ಹು.' ಎಂದೇ ಪ್ರಸಿದ್ಧರಾದವರು ಮಾತ್ರವಲ್ಲ ಪ್ರೀತಿ, ಅಭಿಮಾನದ ವ್ಯಕ್ತಿಯಾಗಿದ್ದಾರೆ. ಗೊಳಸಂಗಿ ಗ್ರಾಮದ ಚೈತನ್ಯ ಶಕ್ತಿಯಾಗಿದ್ದಾರೆ. ಭಾವೈಕ್ಯತೆಯ ಬಂಧು ಎನಿಸಿದ್ದಾರೆ. ನಮ್ಮ ಗ್ರಾಮಗಳ ನಾಡಿನ ಜನತೆಗೆ ಮಾದರಿಯಾಗುವಂತಹ ಆದರ್ಶದ ಬದುಕು ಇವರದಾಗಿದೆ, 'ಕಾ.ಹು.' ಅವರ ಬದುಕು-ಬರಹದ ಪ್ರತಿಬಿಂಬ ಈ ಕಿರು ಗ್ರಂಥದಲ್ಲಿದೆ.

**ಕೌಟುಂಬಿಕ ಪರಿಸರ :**

ಭಾರತೀಯ ಜೀವನ ಪದ್ಧತಿಯಲ್ಲಿ ಸಾಮಾನ್ಯವಾಗಿ ವಂಶಪಾರಂಪಾರಿಕ ವೃತ್ತಿ ಮುಂದುವರೆದು ಬಂದಿದೆ. ಮತ-ಧರ್ಮಗಳಿಗೆ ಅನುಗುಣವಾಗಿ ಕೆಲವು ವೃತ್ತಿಗಳಿದ್ದರೆ, ಅದನ್ನು ಹೊರತಾದ ವೃತ್ತಿಗಳೂ ಇವೆ. ಮೊದಲನೆಯವು ಜಾತಿಸೂಚಕ ವೃತ್ತಿಗಳು. ಅಂದರೆ, ಬಡಿಗ, ಕಮ್ಮಾರ, ಕುಂಬಾರ, ಹೂಗಾರ, ಸಮಗಾರ, ಬಣಕಾರ ಇತ್ಯಾದಿ, ಎರಡನೆಯವು ಜಾತಿ ಹೊರತಾದ ವೃತ್ತಿಗಳು. ಒಕ್ಕಲಿಗ ಎಂಬುದು ಜಾತಿಯೂ ಹೌದು; ವೃತ್ತಿಯೂ ಹೌದು ಒಕ್ಕಲುತನ ಮಾಡುವವರೆಲ್ಲರೂ ಒಕ್ಕಲಿಗರೆ. ಜನಪದರೇ ಹೇಳುವ ಮಾತು ನೋಡಿ " ಒಕ್ಕಲಿಗಣ್ಣ ಬಿತ್ತೊ ಹೊನ್ನ ಸುರಿ ಮಳಿಯೊ ಸುರಿ ಮಳಿಯೊ ಎಂದು ಹಾಡುವಲ್ಲಿ ಒಕ್ಕಲಿಗ ಪದವನ್ನು ಗಮನಿಸಬಹುದು" ಉತ್ತರ ಕರ್ನಾಟಕದಲ್ಲಿ ಕೃಷಿಕ ಎಂಬುದು ಶಿಷ್ಟವಾದರೆ, ಜನಪದರು 'ರೈತ', 'ಒಕ್ಕಲಿಗ' ಎಂದು ರೂಢಿಯೊಳಗಿರಿಸಿಕೊಂಡು ಬಂದವರು. 'ರೈತಾಪಿ' ಮನೆತನದಲ್ಲಿ ತಂದೆ ಹುಸೇನಸಾಬ, ತಾಯಿ ಷಹಜಾನಬೀ ಪುತ್ರನಾಗಿ ಗೊಳಸಂಗಿ ಗ್ರಾಮದಲ್ಲಿ ದಿನಾಂಕ ೧೨-೦೬-೧೯೩೬ ರಂದು ಕಾಸೀಮಸಾಬರು ಜನಿಸಿದರು. ಎಪ್ಪತ್ತು ವಸಂತಗಳನ್ನು ಕಂಡಿರುವ ಕಾ.ಹು. ಅವರದು ತುಂಬು ಸಂಸಾರ; ಆದರ್ಶದ ಬಾಳು. ಇಬ್ಬರು ಗಂಡು ಹಾಗೂ ಮೂವರು ಹೆಣ್ಣುಮಕ್ಕಳು ಇದ್ದಾರೆ.

'ಕೋಟಿ ವಿದ್ಯೆಗಳಲ್ಲಿ ಮೇಟಿ ವಿದ್ಯೆಯೇ ಲೇಸು' ಎಂಬುದನ್ನು ಸಾಧಿಸಿ ತೋರಿಸಿದ ಛಲದಂಕ ಮಲ್ಲ ಇವರು. ತಾವು ಕೈಹಾಕಿದ, ಕೈಗೆತ್ತಿಕೊಂಡ ಯಾವುದೇ ಕೆಲಸವನ್ನು ಮಾಡಿ ಯಶಸ್ವಿಯಾಗದೇ ಬಿಟ್ಟವರಲ್ಲ. ತಂದೆಯಿಂದ ಬಳುವಳಿಯಾಗಿ ಬಂದ ಕೃಷಿ ಪದ್ಧತಿಯನ್ನು ಆಧುನೀಕರಿಸಿಕೊಂಡರೂ ಸಾವಯವ ಕೃಷಿ ಪದ್ಧತಿಯಿಂದ ದೂರ ಉಳಿದವರಲ್ಲ. ವಿಶೇಷವಾಗಿ 'ಬಿಜಾಪೂರ' ದವರ ಸ್ವಾತಂತ್ರ್ಯ 'ಉಳ್ಳಿ ಅಗಿ,' 'ಉಳ್ಳಿ ಬೀಜ'ಕ್ಕೆ ಹೆಸರಾದ ಮನೆತನ. ಅಂದಿನ ೮ ನೆಯ ತರಗತಿಯ

ವಿದ್ಯಾಭ್ಯಾಸದಿಂದ ಹೇರಳವಾಗಿ ದೊರೆಯಬಹುದಾದ ಸರಕಾರಿ ನೌಕರಿಗಳಿಗೆ ಆಸೇ ಮಾಡದೆ, ಹಳ್ಳಿಗೆ ಹಿಂದಿರುಗಿ ಒಕ್ಕಲುತನಕ್ಕೆ ಸಿದ್ಧರಾದರು. ಮಣ್ಣಿನ ಮಗನಾಗಿ ಕಂಕಣ ಕಟ್ಟಿ ನಿಂತರು. ಒಡೆಯನೆಂಬುದನ್ನು ಮರೆತು ಆಳುಗಳಲ್ಲಿ ತಾವೂ ಒಬ್ಬರಾಗಿ ನೆಟ್ಟು ಕಡೆದರು. ಕುಂಟೆ-ರೆಂಟೆ ಹೊಡೆದರು, ಹಂತಿ ಕಟ್ಟಿ ಹಾಡಿ ರಾಶಿ ಮಾಡಿದರು. ಹಾಗೂ ನಾಲ್ಕು ತೆರೆದ ಬಾವಿಗಳನ್ನು ಕೂಡಾ ತೋಡಿದರು. ಬಸವ ನಾಡಿನಲ್ಲಿ ಬಂದ ಈ ವ್ಯಕ್ತಿಯಲ್ಲಿ ಕೌಟುಂಬಿಕ ಹಾಗೂ ಸಾಂಸ್ಕೃತಿಕ ಪರಂಪರೆಯ ಮೌಲ್ಯಗಳು ಬಾಲ್ಯದಿಂದಲೇ ರಕ್ತಗತವಾಗಿದ್ದವು ಎನ್ನಬಹುದು. ಹೀಗಾಗಿ ಅಂದಿನಿಂದ ಇಂದಿನವರೆಗೆ ಕಾ.ಹು. ಅವರದು ನೆಮ್ಮದಿಯ ಬದುಕು. ಅಷ್ಟೇ ಅಲ್ಲ; 'ಸಾರ್ಥಕ ಬದುಕಿನ ಸಂತ' ಎಂಬಂತಹ ಅನುಕರಣೀಯ ಜೀವನ ಅವರದಾಗಿದೆ.

ಕೆಲವರಿಗೆ ಬಾಲ್ಯದಿಂದಲೂ ಓದಬೇಕು, ಓದಿ ಒಳ್ಳೆಯ ನೌಕರಿ ಹಿಡಿಯಬೇಕೆಂಬ ಮಹದಾಸೆ ಇರುತ್ತದೆ. ಆದರೆ ಕಾ.ಹು. ಅವರಿಗೆ ಕೃಷಿಯೇ ಪಠಶಾಲೆಯಾಯಿತು. ತಂದೆಯವರ ಮಾರ್ಗದರ್ಶನದಂತೆ ಒಕ್ಕುಲತನದ ದಾರಿ ಹಿಡಿದರು. ಪ್ರಗತಿಪರ ರೈತರಾದರು. ಸಾಹಿತಿ, ಶಿಕ್ಷಣ ಪ್ರೇಮಿಯಾಗಿ ಬೆಳೆದರು. ನಾಡಿಗೆ ಮಾದರಿಯಾಗಿ ಬಾಳಿದರು.

ಬಾಲ್ಯದಿಂದ ಯೌವನದ ಅವಧಿಯಲ್ಲಿಯೇ ಕಾ.ಹು. ಅವರಿಗೆ ಸಾಹಿತ್ಯ, ರಂಗಭೂಮಿಯ ಗೀಳು ಇತ್ತು. ಮೂರನೆಯ ವರ್ಗದವರೆಗೆ ಕನ್ನಡ ನಂತರ ಉರ್ದುವನ್ನು ಓದಿಕೊಂಡರು. ಶಾಲಾ ದಿನಗಳಲ್ಲಿ 'ಲವ ಕುಶ', 'ರೈತನ ಗೋಳು' ನಾಟಕಗಳಲ್ಲಿ ಪಾತ್ರ ಮಾಡಿದ್ದು, ಆಗ ಇವರ ಕಲೆಯನ್ನು ಮೆಚ್ಚಿ ಒಂದು ರೂಪಾಯಿ ಆಹೇರಿ ಕೊಟ್ಟಿದ್ದನ್ನು ಕಾ.ಹು. ಇಂದಿಗೂ ನೆನೆಪಿಸಿಕೊಳ್ಳುತ್ತಾರೆ. ಮುಂದೆ ಸಾಹೇಬಿಯವರನ್ನು ಮದುವೆಯಾದ ನಂತರ ನಾಟಕ ಬರೆದು ಆಡಿಸುವುದರಲ್ಲಿ ಮತ್ತು ತಮ್ಮ ರೈತಾಪಿ ಕಾಯಕದಲ್ಲಿ ನಿರತರಾದರು.

**ಸಾಮಾಜಿಕ ಪರಿಸರ :**

'ಓಣಿಯ ಕೂಸು ಬೆಳೆಯಿತು, ಕೋಣೆಯ ಕೂಸು ಕೊಳೆಯಿತು' ಎಂಬುದು ಪ್ರಚಲಿತ ಗಾದೆ ಮಾತು. ವ್ಯಕ್ತಿ ಪರಿಸರದ ಕೂಸಾಗಿ ಬೆಳೆಯಬೇಕು. ಹಾಗೆ ಬೆಳೆದವರು ಕಾ.ಹು. ಅವರು. ಅಂದಾಗಲೇ ಅವರು ಇಡೀ ಗೊಳಸಂಗಿಯ ಗ್ರಾಮವೊಂದರಲ್ಲಿ ಒಳ್ಳೆಯ ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ, ಭಾವೈಕ್ಯತೆಯ ಪರಿಸರ ರೂಪಿಸಲು ಸಾಧ್ಯವಾಯಿತು.

'ಸಮಾಜ ನನಗೆ ಏನನ್ನು ಕೊಟ್ಟಿದೆ ಎನ್ನುವುದಕ್ಕಿಂತ ನಾನು ಸಮಾಜಕ್ಕೆ ಏನನ್ನು ಕೊಟ್ಟಿದ್ದೇನೆ' ಎಂದು ಪ್ರಶ್ನಿಸಿಕೊಳ್ಳಬೇಕೆಂಬ ಆಶಯದ ವ್ಯಕ್ತಿ ಕಾ.ಹು.

ಅವರು ಆಗಿರುವುದರಿಂದ, ಸಮಾಜ ಸೇವೆಗೆ ತಮ್ಮನ್ನು ತಾವು ಸಂಪೂರ್ಣವಾಗಿ ಸಮರ್ಪಿಸಿಕೊಂಡರು. ಯಾವುದೇ ಕೆಲಸವನ್ನಾಗಲಿ ನಿಷ್ಠೆ ಪ್ರಾಮಾಣಿಕತೆಯಿಂದ ಮಾಡುವ ಮನೋಭಾವದವರು.

'ಜನ ಸೇವೆಯೇ ಜನಾರ್ಧನ ಸೇವೆ' ಎಂಬ ನಂಬಿಕೆಯ ತಳಪಾಯ ಇವರ ಕಾರ್ಯಕ್ಕೆ ಇಂಬು ನೀಡಿತು. ತಾನು ಮಾತ್ರ ಅಭಿವೃದ್ಧಿಯಾದರೆ ಸಾಲದು. ತನ್ನ ಗ್ರಾಮವು ಸರ್ವಾಂಗೀಣ ಅಭಿವೃದ್ಧಿಯಾಗಬೇಕೆಂಬ ಕನಸು ಕಟ್ಟಿಕೊಂಡು ಅದಕ್ಕಾಗಿ ಕ್ರಿಯಾರಂಗಕ್ಕಿಳಿದ ನಿಷ್ಠಾವಂತ ಸಮಾಜ ಸೇವಕ, ಸುಧಾರಕರು.

'ಸಮಾಜ' ಎಂಬ ವ್ಯಾಖ್ಯಾನ ಸಮಾಜ ಶಾಸ್ತ್ರದ ಹಿನ್ನೆಲೆಯಲ್ಲಿ ಬೇರೆಯೇ ಇದ್ದರೂ, ಕಾ.ಹು. ಅವರದೇ ಒಂದು ವ್ಯಾಖ್ಯಾನ ಬೇರೆ. ಊರಲ್ಲಿ ಹತ್ತಾರು ಸಮಾಜದವರಿದ್ದರೂ 'ಊರೇ ಒಂದು ಸಮಾಜ'ವಾಗಬೇಕೆಂಬ ಸದಾಶಯದವರು. ಸಾಗರದೊಡಲಲ್ಲಿ ಅಡಗಿರುವ ಅನೇಕ ಹಳ್ಳ-ನದಿಗಳಂತೆ 'ಜೀವ ನದಿ' ಒಂದೇಆಗಿರುವಂತೆ ಮಾಡಿದ ಕೀರ್ತಿ ಇವರಿಗೆ ಸಲ್ಲಬೇಕು. 'ಮನುಷ್ಯ ಸಂಘ ಜೀವಿ, ಸಮಾಜ ಜೀವಿ' ಎಂಬುದನ್ನು ಚಾಚೂ ತಪ್ಪದೇ ಅನುಸರಿಸಿದವರು. ಇತರರೂ ಅನುಸರಿಸುವಂತೆ ಮಾಡಿದವರು.

ಗೊಳಸಂಗಿಯಲ್ಲಿ ಬೇರೆ ಬೇರೆ ಸಮಾಜಗಳಿರಲಿಲ್ಲವೆಂದು ತಿಳಿಯಬೇಡಿ. ಊರೆಂದ ಮೇಲೆ ಎಲ್ಲ ಸಮಾಜದವರು ಇರಬೇಕಲ್ಲವೇ? ಇಲ್ಲಿಯೂ ದಲಿತ ಸಮಾಜ, ದೇವಾಂಗ ಸಮಾಜ, ಬ್ರಾಹ್ಮಣ, ಮುಸ್ಲಿಂ, ಹಾಲು ಮತದ ಸಮಾಜ, ಮರಾಠಾ ಸಮಾಜ , ಬಣಜಿಗ (ಶೆಟ್ಟರ) ಸಮಾಜ, ಒಕ್ಕಲಿಗ ಸಮಾಜ ಮೊದಲಾದ ಸಮಾಜದವರಿದ್ದರೂ ನಾವೆಲ್ಲರೂ ಒಂದೇ ಸಮಾಜದವರೆಂಬ ಭಾವ ಬೆಳೆಯುವಂತೆ ಮಾಡಿದವರು. ಪ್ರತಿ ಸಮಾಜ ವ್ಯಕ್ತಿ-ಸಂಘ-ಸಂಸ್ಥೆಗಳು ಅಭಿವೃದ್ಧಿಯಾಗುವಂತೆ ಮಾಡಿದವರು. ಊರಿನ, ಸಮಾಜದ ಹಿತವೇ ತನ್ನ ಹಿತವೆಂದು ಬಗೆದು ತಮ್ಮ ಸ್ವಹಿತಾಸಕ್ತಿ ಸ್ವಾರ್ಥವನ್ನು ಬದಿಗೊತ್ತಿ ಬದುಕ ಸಾಗಿಸಿದವರು. ಊರಿನ ಧಾರ್ಮಿಕ, ಸಾಂಸ್ಕೃತಿಕ ಉತ್ಸವಗಳಲ್ಲಿ ಎಲ್ಲ ಸಮಾಜದ ಬಾಂಧವರು ಒಂದೆಡೆ ಸೇರುವಂತೆ ಮಾಡಿದವರು.

'ಶರಣರ ನೆನೆದರ ಸರಗೀಯ ಇಟ್ಟಾಂಗ, ಶರಣರ ನೆನೆಯೋ ಎಲೆ ಮನವೆ' ಎಂದು ಜನಪದರು ಹೇಳುವಂತೆ, ಕಾ.ಹು. ಅವರು ಸದಾ ಬಸವಾದಿ ಶರಣರನ್ನು ನೆನೆಯುತ್ತಲೇ ಇದ್ದವರು. ಬಸವಣ್ಣನೆಂದರೆ ಇವರಿಗೆ ತುಂಬಾ ಅಚ್ಚು ಮೆಚ್ಚು. ಜನಪದ ಸಾಹಿತ್ಯದಲ್ಲಿ ಬಸವಣ್ಣನ್ನು ಕುರಿತು ಹತ್ತಾರು ಉಪನ್ಯಾಸ ನೀಡಿದವರು. ಊರ ಪರವಾಗಿಯೆ ದೇವಾಂಗ ಸಮಾಜ, ಶೆಟ್ಟರ ಸಮಾಜದವರು ಇವರ

ಕಾರ್ಯ ಚಟುವಟಿಕೆಗಳನ್ನು ಮೆಚ್ಚಿ ಪ್ರಶಸ್ತಿ ನೀಡಿ ಗೌರವಿಸಿದ್ದಾರೆ. ಗೌರವಿಸಲೇಕಾದ ವ್ಯಕ್ತಿಯೂ ಹೌದು. 'ಕಾ.ಹು.' ಎಂಬುದೊಂದು ವ್ಯಕ್ತಿ ಮಾತ್ರವಲ್ಲ. ಊರಿನ ಶಕ್ತಿಯಾಗಿತ್ತೆಂದು ಅನೇಕ ಅವರ ಒಡನಾಡಿಗಳು ನುಡಿಯುತ್ತಾರೆ. 'ಸರಳ ಜೀವನ ಸಹಜ ಸ್ವಭಾವ,' ನೇರ ನುಡಿ–ನಡ, ನುಡಿದಂತೆ ನಡೆಯುವ ಧೀಮಂತ ವ್ಯಕ್ತಿತ್ವ ಅವರದಾಗಿದೆ.

ಶೈಕ್ಷಣಿಕ ಪರಿಸರ :

ಗ್ರಾಮವೊಂದು ಅಕ್ಷರಲೋಕವಾಗಬೇಕು. ಅಕ್ಷರ ದೀಪ ಪ್ರತಿಯೊಬ್ಬನ ಮನ–ಮನೆ ಬೆಳಗಬೇಕು. ಇದರಿಂದ ಇಡೀ ಗ್ರಾಮವೇ ಅಕ್ಷರ ಸಂಸ್ಕೃತಿಗೆ ಒಳಪಡಬೇಕೆಂದು ಸದಾ ಚಿಂತಿಸುವ ಕ್ರಿಯಾಶೀಲ ಮನಸ್ಸುಳ್ಳವರು, ಕಾ.ಹು. ಅವರು ಮಕ್ಕಳ ಮಾನಸಿಕ, ಬೌದ್ಧಿಕ, ದೈಹಿಕ ವಿಕಾಸಕ್ಕೆ ಶಿಕ್ಷಣ ಪ್ರಧಾನ ಮಾಧ್ಯಮವಾಗಬೇಕೆಂಬ ಆಶಯದ ಕಾ.ಹು. ಅವರು ತಾವು ಕಲಿತದ್ದು ೮ ನೆಯ ವರ್ಗದವರಿಗೆ ಮಾತ್ರ, ಕನ್ನಡ, ಉರ್ದು ಮತ್ತು ಹಿಂದಿ ಮೂರು ಭಾಷೆಗಳಲ್ಲಿ ಅಗತ್ಯ ಜ್ಞಾನ ಗಳಿಸಿಕೊಂಡಿರುವುದು ಹಿರಿಮೆಯ ಸಂಗತಿ.

ಕಾ.ಹು. ಅವರಿಗೆ ಗ್ರಾಮೀಣ ಪರಿಸರದ ಶಿಕ್ಷಣದ ಬಗೆಗೆ ಅಪಾರ ಕಾಳಜಿ. ತಮ್ಮೂರಿನ ಮಕ್ಕಳಿಗೆ ಪ್ರಾಥಮಿಕದಿಂದ ಉನ್ನತ ಶಿಕ್ಷಣದವರೆಗೆ ಶೈಕ್ಷಣಿಕ ಸೌಲಭ್ಯಗಳು ಸಿಗುವಂತಾಗಬೇಕೆಂಬ ಕನಸು–ಹಂಬಲ ಅವರದು.ಗ್ರಾಮದ ಕನ್ನಡ ಪ್ರಾಥಮಿಕ ಶಾಲೆಯ ಶತಮಾನೋತ್ಸವದ ಸ್ಮರಣಾರ್ಥವಾಗಿ ನಾಲ್ಕು ಎಕರೆ ಜಮೀನು ಮತ್ತು ಹತ್ತು ಕೊಠಡಿಗಳನ್ನು' ತಮ್ಮ ಗೆಳೆಯರ ಬಳಗದಿಂದ ಕಟ್ಟಿಸಿ ಕೊಟ್ಟಿದ್ದನ್ನು ನೋಡಿದರೆ, ಕಾ.ಹು. ಅವರ ಶೈಕ್ಷಣಿಕ ಚಿಂತನೆ, ಕಾಳಜಿ ಎಂತಹದೆಂಬುದು ಎಲ್ಲರಿಗೂ ತಿಳಿಯುವಂತಹದ್ದೇ. ಅವರ ಅವಿರತ ಪ್ರಯತ್ನದಿಂದ ಇಂದು ಗೊಳಸಂಗಿ ಗ್ರಾಮದಲ್ಲಿ ಸರಕಾರಿ ಕನ್ನಡ ಪ್ರಾಥಮಿಕ ಶಾಲೆ, ಸರಕಾರಿ ಉರ್ದು ಪ್ರಾಥಮಿಕ ಶಾಲೆ ಶ್ರೀ ರಾಮಸ್ವಾಮಿ ಅಪ್ಪಣ್ಣಪ್ಪ ದಳವಾಯಿ ಪ್ರೌಢ ಶಾಲೆ, ಶ್ರೀ ಬಿ.ಎಸ್.ಪವಾರ ಪದವಿ ಪೂರ್ವ. ಕಾಲೇಜುಗಳು ಬೆಳೆದು ನಿಂತಿವೆ. ಇದಕ್ಕೆಲ್ಲ ಊರ ಹಿರಿಯರ ಮನವೊಲಿಸುವಲ್ಲಿ ಯಶಸ್ವಿಯಾದರು.

ಗ್ರಾಮದಲ್ಲಿ ಶೈಕ್ಷಣಿಕ ಪರಿಸರವನ್ನು ಇನ್ನಷ್ಟು ವರ್ಧಿಸಬೇಕೆಂಬ ಇಚ್ಛೆಯಿಂದ ಮತ್ತು ನಮ್ಮೂರಿನ ಮಕ್ಕಳು ಪ್ರಾಥಮಿಕದಿಂದ ಪದವಿ ಶಿಕ್ಷಣದವರೆಗೆ ಪರ ಊರಿಗೆ ಹೋಗುವಂತಾಗಬಾರದೆಂಬ ಕಾರಣದಿಂದ ೨೦೦೪ ರಲ್ಲಿ ಸರಕಾರಿ ಪದವಿ ಕಾಲೇಜೊಂದನ್ನು ಆರಂಭಿಸಿದ್ದು ಕೂಡಾ ಹೆಮ್ಮೆಯ ಸಂಗತಿ.

ಶಿಕ್ಷಣ ಪ್ರೇಮಿಯಾದ ಕಾ.ಹು. ಅವರು ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾವರ್ಧಕ

ಸಂಘದ ಕಾರ್ಯದರ್ಶಿಗಳಾಗಿ, ಶ್ರೀ ರಾ. ಅ. ದಳವಾಯಿ ಮಾಧ್ಯಮಿಕ ಶಾಲೆಯ ಅಭಿವೃದ್ಧಿಗಾಗಿ ಹಗಲಿರುಳು ಶ್ರಮಿಸಿದರು. ಇದರಿಂದಾಗಿ ಗ್ರಾಮೀಣ ಪರಿಸರದಲ್ಲಿ ಇದೊಂದು 'ಮಾದರಿಯ ಮಾಧ್ಯಮಿಕ ಶಾಲೆ'ಯಾಗಿ ಹೊರಹೊಮ್ಮಿದೆ. ಭೌತಿಕವಾಗಿ ಸುಂದರವಾದ ಕಟ್ಟಡ ಎದ್ದು ನಿಂತಿರುವಂತೆ ಬೌದ್ಧಿಕವಾಗಿ, ಶೈಕ್ಷಣಿಕವಾಗಿ, ಆ ಭಾಗದ ಉತ್ತಮ ಶಾಲೆ ೧೯೭೧ ರಲ್ಲಿ ಪ್ರಧಾನ ಸಂಘಟಿಕರಾಗಿ, ತಾವು ಶಿಕ್ಷಣ ಪಡೆದ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಯ ಶತಮಾನೋತ್ಸವವನ್ನು ಪರಮ ಪೂಜ್ಯ ಶ್ರೀ ಮಲ್ಲಿಕಾರ್ಜುನ ಮಹಾಸ್ವಾಮಿಗಳು ಗದಗ ಹಾಗೂ ಶ್ರೀಶೈಲದ ನಿಡುಮಾಮಿಡಿ, ಜ.ಚ.ನಿ. ಮಹಾಸ್ವಾಮಿಗಳ ದಿವ್ಯ ಸಾನಿಧ್ಯದಲ್ಲಿ 'ಗೊಳಸಂಗಿ ಗೆಳೆಯರ ಬಳಗ'ದ ವತಿಯಿಂದ ಅತ್ಯಂತ ಸಡಗರ ಸಂಭ್ರಮದಿಂದ ಆಚರಿಸಿದ್ದು ಊರಿನ ಜನಮಾನಸದಲ್ಲಿ ಇನ್ನೂ ಹಸಿರಾಗಿದೆ. ಅಂದಿನ ಸಮಾರಂಭದಲ್ಲಿ ಪ್ರೊ.ಬಿ.ಟಿ. ಸಾಸನೂರ, ಗ್ರಾಮಾಯಣದ ರಾವಬಹದ್ದೂರ, ಶಂ. ಗು. ಬಿರಾದಾರ, ಸಿ.ಸು. ಸಂಗಮೇಶ, ಪ್ರೊ. ಸಂಗಮನಾಥ ಹಂಡಿ ಮೊದಲಾದ ಸಾಹಿತಿಗಳು ಭಾಗವಹಿಸಿದ್ದರು. ಕಾಸೀಬಸಾಬರ ಸಾಧನೆಯನ್ನು ಹೃದಯಾರೆ ಹರಿಸಿದರು.

ತಾವು ಕಟ್ಟಿ ಬೆಳೆಸಿದ ಸಂಸ್ಥೆಯೊಂದು ಬೆಳೆದು ಬೆಳ್ಳಿ ಹಬ್ಬವನ್ನು ಆಚರಿಸುತ್ತದೆ ಎಂದರೆ ಯಾರಿಗೇ ತಾನೇ ಸಂತೋಷ ಆಗುವುದಿಲ್ಲ ಹೇಳಿ? ಶ್ರೀ ರಾ. ಅ. ದಳವಾಯಿ ಮಾಧ್ಯಮಿಕ ಶಾಲೆ ಕಾ.ಹು. ಅವರ ಕನಸಿನ ಕೂಸು. ಸಂಸ್ಥೆ–ಶಾಲೆ–ಶಿಕ್ಷಕ–ವಿದ್ಯಾರ್ಥಿ ಎಂದರೆ ಹೀಗೆಯೇ ಇರಬೇಕೆಂಬ ಆದರ್ಶ ಅವರದು. ಈ ಶಾಲೆಯನ್ನು ಹಾಗೇಯೇ ಬೆಳೆಸಿ ಉಳಿಸಿಕೊಂಡು ಬಂದ ಹೆಗ್ಗಳಿಕೆ ಕಾ.ಹು. ಅವರಿಗೆ ಸಲ್ಲಬೇಕು. ದಿ. ೦೯.೦೩.೨೦೦೮ ರಂದು ಈ ಶಾಲೆಯ ಬೆಳ್ಳಿ ಹಬ್ಬವನ್ನು ತುಂಬಾ ಸಂಭ್ರಮ–ಸಡಗರದಿಂದ ಆಚರಿಸಿದರು. ಇಲಕಲ್ಲ ಹಾಗೂ ಮರೇಗುದ್ದಿಯ ಶ್ರೀ ಮ.ನಿ.ಪ್ರ. ಗುರುಮಹಾಂತ ಸ್ವಾಮಿಗಳು, ಅಂಗಡಗೇರಿಯ ಶ್ರೀ ಪರಪ್ಪ ಶರಣರ ದಿವ್ಯ ಸಾನಿಧ್ಯದಲ್ಲಿ, ಮಾಜಿ ಸಚಿವರಾದ ಶ್ರೀ ಬಿ.ಎಸ್. ಪಾಟೀಲರ ಅಧ್ಯಕ್ಷತೆಯಲ್ಲಿ, ಡಾ. ಎಂ.ಎಂ. ಕಲಬುರ್ಗಿ ಹಾಗೂ ಶ್ರೀ ಗುರುಲಿಂಗ ಕಾಪಸೆ ಆತಿಥ್ಯದಲ್ಲಿ ವಿದ್ಯುಕ್ತವಾಗಿ ಸಮಾರಂಭ ನಡೆಯಿತು. ಇದೇ ಸಂದರ್ಭದಲ್ಲಿ ಕವಿಗೋಷ್ಠಿಯನ್ನು ಏರ್ಪಡಿಸಲಾಗಿತ್ತು. ಊರ ಜನರೆಲ್ಲ ಹಬ್ಬದಂತೆ ಈ ಕಾರ್ಯಕ್ರಮವನ್ನು ಆಚರಿಸಿದರು. ಹೀಗೆ ಗ್ರಾಮೀಣ ಪರಿಸರದಲ್ಲಿ ಕಾ.ಹು. ಅವರು ಒಳ್ಳೆಯ ಶೈಕ್ಷಣಿಕ ಪರಿಸರವನ್ನು ರೂಪಿಸುವಲ್ಲಿ ಪಟ್ಟ ಪರಿಶ್ರಮ ಅನನ್ಯವಾದುದು. ಇಂದಿನ ಮುಂದಿನ ಯುವ ಜನಾಂಗಕ್ಕೆ ಸಮಾಜ ಸೇವೆ ಮಾಡುವವರಿಗೆ ಮಾದರಿ ಎಂದು ನಾಡಿನ ಖ್ಯಾತ ಸಂಶೋಧ ಡಾ. ಎಂ. ಎಂ. ಕಲಬುರ್ಗಿ ಈ ಸಮಾರಂಭದಲ್ಲಿ ನುಡಿದರು. ಶರಣ ಸಂಸ್ಕೃತಿಯ ಪ್ರಭಾವ ಹೊಂದಿದ ಕಾಶಿಮಸಾಬರು ಮಾಡಿದ ಸಾಧನೆ.

ಸಾಹಿತ್ಯಕ ಪರಿಸರ :

'ಎಲ್ಲ ಬಲ್ಲವರಿಲ್ಲ, ಬಲ್ಲವರು ಬಹಳಿಲ್ಲ
ಬಲ್ಲಿದರೂ ಇದ್ದು ಬಲವಿಲ್ಲ / ಸಾಹಿತ್ಯ
ಎಲ್ಲರಿಗೂ ಅಲ್ಲ ಸರ್ವಜ್ಞ'

ಎಂಬುದು ಸರ್ವಜ್ಞ ಕವಿಯ ಬಹು ಪ್ರಸಿದ್ಧ ಅನುಭವದ ಪದ್ಯ. ಸಾಹಿತ್ಯ ಕೃಷಿ ಕೆಲವರಿಗೆ ಮಾತ್ರ ಸಾಧ್ಯ. ವಿದ್ಯಾರ್ಥಿ ದೆಸೆಯಿಂದಲೂ ಕಾ.ಹು. ಅವರಿಗೆ ಜನಪದ ಸಾಹಿತ್ಯದ ಪ್ರಭಾವ, ಹಾಗೂ ಹಲಸಂಗಿ ಗೆಳೆಯರ ಬದುಕು–ಬರಹ, ಬಿಜಾಪೂರ ಜಿಲ್ಲೆಯ ಸಾಹಿತಿಗಳ ಒಡನಾಟ ಇರುವುದರಿಂದ ಈ ಸಾಹಿತ್ಯಕ ಪರಿಸರ ಅವರನ್ನೂ ಸಾಹಿತಿಯನ್ನಾಗಿ ಮಾಡಿತು. ಗೊಳಸಂಗಿ ಹಾಗೂ ಸುತ್ತಲಿನ ಗ್ರಾಮದ ಜನ ಅವರನ್ನು , ಸಾಹಿತಿ 'ಕಾ.ಹು. ಬಿಜಾಪೂರ' ಎಂದೇ ಕರೆಯುವ ವಾಡಿಕೆ.

ಸಾಹಿತಿಯಾಗಬಯುಸುವವರಿಗೆ ಮೊದಲು ಹೃದಯವಂತಿಕೆ ಇರಬೇಕು. ಪುಸ್ತಕ ಓದುವುದು ಹವ್ಯಾಸವಲ್ಲ; ಅದೊಂದು ಕರ್ತವ್ಯವೆಂದು ಭಾವಿಸಬೇಕು. ಜೊತೆಗೆ ಪ್ರತಿಭೆ–ಪ್ರಯತ್ನ ಇರಬೇಕು. ಈ ಎಲ್ಲ ಗುಣಗಳು ಕಾ.ಹು. ಅವರಲ್ಲಿ ಇರುವುದರಿಂದ ಸಾಹಿತಿಯಾಗಿ ಹೊರಹೊಮ್ಮಲು ಸಾಧ್ಯವಾಯಿತೆನ್ನಬೇಕು.

ಕಾ.ಹು. ಬಿಜಾಪೂರ ಅವರು ಪುಸ್ತಕ ಸಂಸ್ಕೃತಿಯ ಪರಿಸರದವರು. ಎಲ್ಲಿಯೇ ಹೋಗಲಿ ಅಲ್ಲಿಂದ ಬರುವಾಗ ಪುಸ್ತಕಗಳನ್ನು ಖರೀದಿಸಿ, ಕೈಯಲ್ಲಿ, ಬಗಲಲ್ಲಿ ಪುಸ್ತಕ ಹಿಡಿದುಕೊಂಡು ಬರುವ ಜಾಯಮಾನದವರು. 'ಮೈಮೇಲೆ ಹರಕು ಬಟ್ಟೆಯಿದ್ದರೂ ಪರವಾಗಿಲ್ಲ; ಕೈಯಲ್ಲೊಂದು ಪುಸ್ತಕ ಇರಲಿ' ಎಂಬ ಬಂಕಿಮಚಂದ್ರ ಚಟರ್ಜಿಯವರ ಮಾತು ಇವರ ಮೇಲೆ ತುಂಬ ಪರಿಣಾಮ ಬೀರಿತ್ತೆನ್ನಬೇಕು. ಕಾಸೀಮಸಾಬರು ಅದೆಷ್ಟು ಪುಸ್ತಕಗಳನ್ನು ಖರೀದಿಸಿದ್ದಾರೆಂದರೆ, ಜೋಳ, ಗೋದಿ, ಉಳ್ಳಿ ಬೀಜದ ಚೀಲಗಳನ್ನು ನಿಟ್ಟ ಹಚ್ಚುವ ಕೋಣೆಯಲ್ಲಿ ಪುಸ್ತಕಗಳನ್ನು ಒಟ್ಟಿದ್ದಾರೆ. ಮನೆಯನ್ನೇ 'ಗ್ರಂಥಾಲಯ' ವನ್ನಾಗಿ ಮಾಡಿಕೊಂಡಿದ್ದಾರೆ. ನಿರಂತರ ಓದು ಇವರದು. ಕೇವಲ ತಾವು ಓದಿದರೆ ಮಾತ್ರ ಸಾಲದು; ಗ್ರಾಮದ ಜನರೆಲ್ಲರೂ ಓದುವಂತಾಗಬೇಕೆಂಬ ಸದಾಶಯದಿಂದ ಕೇಂದ್ರ ಗ್ರಂಥಾಲಯ ಸ್ಥಾಪನೆಗೆ ಮುಂದಾದರು. ಊರಿನ ವಿದ್ಯಾವಂತರಿಂದ ನೌಕರಸ್ಥರಿಂದ ಸಾವಿರಾರು ಪುಸ್ತಕಗಳನ್ನು ಸಂಗ್ರಹಿಸಿದರು. ಇವರ ಪ್ರಯತ್ನಕ್ಕೆ ಗ್ರಾಮ ಪಂಚಾಯತಿಯವರು ಸ್ಥಳ ಒದಗಿಸಿದರು. ಆರಂಭದಲ್ಲಿ ರಾಜ್ಯ ಪ್ರಶಸ್ತಿ ಪುರಸ್ಕೃತ ಶಿಕ್ಷಕರಾದ ಜಿ. ವಾಯ್. ಕೌಲಗಿ ಅವರು, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಐದು ವರ್ಷ

'ಗ್ರಂಥಾಲಯ ಮೇಲ್ವಿಚಾರಕ'ರಾಗಿ ಕೆಲಸ ಮಾಡಿದರು. ಗ್ರಾಮದ ವಿದ್ಯಾರ್ಥಿಗಳ ಸಾರ್ವಜನಿಕರ ಓದುವ ಸಂಖ್ಯೆ ಹೆಚ್ಚುತ್ತ ನಡೆಯಿತು.

ಕೆಲವು ವರ್ಷಗಳ ತರುವಾಯ ಕಾ.ಹು. ಅವರು ಅಂದಿನ ಮಂಡಳ ಪಂಚಾಯತ ಪ್ರಧಾನರಾದ ದಿ॥ ಮಲ್ಲಪ್ಪ ದಳವಾಯಿ ಹಾಗೂ ಗೆಳೆಯರ ಬಳಗದ ನಿಯೋಗದೊಂದಿಗೆ, ವಿಜಾಪೂರ ಜಿಲ್ಲಾ ವಾಚನಾಲಯ ಅಧಿಕಾರಿಗಳಲ್ಲಿಗೆ ಹೋಗಿ, ಕೇಂದ್ರ ಗ್ರಂಥಾಲಯ ಸ್ಥಾಪನೆಯ ಅವಶ್ಯಕತೆ ಕುರಿತು ಮನವರಿಕೆ ಮಾಡಿಕೊಟ್ಟು ಅರ್ಜಿ ಸಲ್ಲಿಸಿದರು. ಗೊಳಸಂಗಿ ಗ್ರಾಮದ ಶೈಕ್ಷಣಿಕ ಪರಿಸರ ಹಾಗೂ ವಿದ್ಯಾವಂತ ಜನರ ಓದುವ ಅಭಿರುಚಿಯನ್ನು ಗಮನಿಸಿದ ಜಿಲ್ಲಾ ಗ್ರಂಥಾಲಯಾಧಿಕಾರಿಗಳಾದ ಶ್ರೀ ಮಾರನಬಸರಿಯವರು ಗೊಳಸಂಗಿ ಗ್ರಾಮಕ್ಕೆ ಕೇಂದ್ರ ಗ್ರಂಥಾಲಯ ಮಂಜೂರು ಮಾಡಿದರು.

**ಕನ್ನಡ ಪುಸ್ತಕ ಪ್ರೇಮ :**

ಬಾಲ್ಯದಲ್ಲಿಯೇ ಕನ್ನಡ ಸಾಹಿತ್ಯದ ಬಗೆಗೆ ಅಭಿರುಚಿ ಆಸಕ್ತಿ ಬೆಳಸಿಕೊಂಡಿದ್ದ ಕಾಸೀಮಸಾಬ ಬಿಜಾಪೂರ ಅವರು ಗುರುಗಳಾದ ಶ್ರೀ ರಾಘವೇಂಧ್ರ ಕುಲಕರ್ಣಿಯವರಿಂದ ಪ್ರೇರಿತರಾದರೆಂದು ಹೇಳುತ್ತಾರೆ. ಗಡಿನಾಡಿನ ಕನ್ನಡ ಸಾಹಿತ್ಯ ಕಂಪು ಇವರನ್ನು ಕ್ರಮೇಣ ಆವರಿಸಿತು. ಮಧುರಚೆನ್ನರ 'ನನ್ನನಲ್ಲ' 'ಬೆಳಗು;' ಸಿಂಪಿ ಲಿಂಗಣ್ಣ ಹಾಗೂ ಮಧುರ ಚೆನ್ನರು ಸಂಪಾದಿಸಿದ 'ಗರತಿಯ ಹಾಡು' ಸಿಂಪಿಲಿಂಗಣ್ಣ ಹಾಗೂ ಪಿ ಧೂಲಾ ಸಂಪಾದಿತ ' ಜೀವನ ಸಂಗೀತ;' ಮತ್ತು ಕಾಪಸೆ ರೇವಪ್ಪನವರ 'ಮಲ್ಲಿಗೆ ದಂಡೆ' ಕೃತಿಗಳು ಕಾಸೀಮಸಾಬರ ಮೇಲೆ ಗಾಢವಾದ ಪರಿಣಾಮ ಬೀರಿದವು. ಆ ಕಾರಣವಾಗಿ ಕಾ.ಹು. ಬಿಜಾಪೂರ ಅವರ ಸಾಹಿತ್ಯ ಓದು, ಮಾತು ಬರವಣಿಗೆ ಕೆಲವು ಸಾಹಿತ್ಯ ಕಾರ್ಯಕ್ರಮ ಸಂಘಟನೆ ಇವೆಲ್ಲ ಆರಂಭವಾಯಿತೆನ್ನಬೇಕು. ಆವಾಗಿನಿಂದಲೇ ಕನ್ನಡ ಪುಸ್ತಕಗಳನ್ನು ಸಂಗ್ರಹಿಸುತ್ತ ಸಾಗಿದ ಅವರು ತಮ್ಮ ಮನೆಯಲ್ಲಿಯೇ ಒಂದು 'ಗ್ರಂಥ ಭಂಡಾರ' ವಾಗುವಷ್ಟು ಪುಸ್ತಕಗಳನ್ನು ಸಂಗ್ರಹಿಸಿದರು.

ಕನ್ನಡದ ಕನಕದಾಸ, ವಚನಕಾರ ಬಸವ-ಅಲ್ಲಮರ ವಚನಗಳು ಇವರಿಗೆ ಕಂಠಪಾಠ. ಮಾತು ಬರಹದಲ್ಲಿ ಸರಳವಾಗಿ ಜನಪದ ತ್ರಿಪದಿಗಳಂತೆ ಕೀರ್ತನೆಗಳು ನಾಲಗೆಯ ಮೇಲೆ ನರ್ತಿಸುತ್ತವೆ. ಗ್ರಾಮೀಣ ಪ್ರದೇಶದ ಈ ರೈತ ಸಾಹಿತಿ, ಬಸವನ ಬಾಗೇವಾಡಿ ತಾಲೂಕ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ, ಬಿಜಾಪೂರ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸದಸ್ಯರಾಗಿ, ಬಾಗಲಕೋಟ ಜಿಲ್ಲಾ ಕನ್ನಡ ಪುಸ್ತಕ ಪರಿಷತ್ತಿನ ಸದಸ್ಯರಾಗಿ, ಅನುಭವ ಮಂಟಪ ಮತ್ತು ವಚನ ಚಿಂತನ ವೇದಿಕೆಯ ಅಧ್ಯಕ್ಷರಾಗಿ ಮಾಡಿದ ಕನ್ನಡ ತಾಯಿ ಸೇವೆ ಅಪಾರವಾದುದು.

## ಗೆಳೆಯರ ಬಳಗದ ಸಂಸ್ಥಾಪಕ :

ಬಿಜಾಪೂರ ಜಿಲ್ಲೆಯ ಗಡಿ ಗ್ರಾಮವಾದ 'ಹಲಸಂಗಿ' ಗೆಳೆಯರ ಪ್ರಭಾವ ಪ್ರೇರಣೆಗೆ ಧಾರವಾಡದ ಗೆಳೆಯರು ಆ ಗುಂಪಿನ ಪ್ರಭಾವಕ್ಕೊಳಗದಂತೆ ಬಿಜಾಪೂರ ಜಿಲ್ಲೆಯಲ್ಲೂ ಅವರ ಪ್ರಭಾವ ಆಗದೇ ಇರಲಿಲ್ಲ. ಹಲಸಂಗಿ ಗೆಳೆಯರ ಪ್ರಭಾವಕ್ಕೆ ಒಳಗಾಗಿ ಸಾಹಿತ್ಯ ಕ್ಷೇತ್ರದಲ್ಲಿ ಸಾಧನೆ ಮಾಡಲು ಮುಂದಾದವರಲ್ಲಿ ಕಾ.ಹು. ಬಿಜಾಪೂರ ಒಬ್ಬರಾಗಿದ್ದಾರೆ. ಜಿಲ್ಲೆಯ ಮಕ್ಕಳ ಸಾಹಿತಿ ಪ.ಗು. ಸಿದ್ಧಾಪೂರ ಅವರು

"ಹಲಸಂಗಿ ಪರಿಣಾಮ ಗೊಳಸಂಗಿ ಮೇಲಾಯ್ತು
ಗೊಳಸಂಗಿ ಬಳಗ ಜನಪದಕೆ । ನೀರುಣಿಸಿ
ಬೆಳೆದರು ಫಸಲು–ಪ್ರಭುಲಿಂಗ"

ಎಂದು ಹೇಳಿರುವಂತೆ ಉತ್ತರ ಕರ್ನಾಟಕದಲ್ಲಿ ಗೆಳೆಯರ ಬಳಗವೊಂದನ್ನು ಸಂಘಟಿಸಿದ್ದು ಕಾ.ಹು. ಅವರ ಸಂಘಟನಾ ಶಕ್ತಿಯನ್ನು ತಿಳಿಸುತ್ತದೆ. ಗೊಳಸಂಗಿ ಗ್ರಾಮದಲ್ಲಿ ಕನ್ನಡ ಸಾಹಿತ್ಯ–ಸಂಸ್ಕೃತಿಯ ಬಗೆಗೆ ಕಾಳಜಿ ಇರುವ ೬೦ಕ್ಕೂ ಹೆಚ್ಚು ಜನ ಸದಸ್ಯರನ್ನು ಒಂದೆಡೆ ಸೇರಿಸಿ ಗೆಳೆಯರ ಬಳಗವನ್ನು ಹುಟ್ಟು ಹಾಕಿದರು. ಈ ಬಳಗದ ಮೂಲಕ ಬಸವನ ಬಾಗೇವಾಡಿ ತಾಲೂಕಿನಲ್ಲಿ ಬೇರೆ ಬೇರೆ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರನ್ನು ಸನ್ಮಾಸಿದರು. ಅನೇಕ ಸಾಹಿತ್ಯ –ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಿದ್ದು ಸಾಹಿತ್ಯಕ, ಸಾಂಸ್ಕೃತಿಕ ಲೋಕದಲ್ಲಿ ದಾಖಲಾಯಿತು.

ಜನಪದ ಸಾಹಿತ್ಯ ವಚನ ಸಾಹಿತ್ಯದ ಬಗ್ಗೆ ಹೆಚ್ಚು ಆಸಕ್ತಿ ಹೊಂದಿದ್ದರಿಂದ ಕನ್ನಡ ಸಾಹಿತ್ಯ ಸಮ್ಮೇಳನ, ಪುಸ್ತಕ ಮೇಳ ಇದ್ದಲ್ಲಿ ಹೋಗಿ ಪುಸ್ತಕಗಳನ್ನು ಖರೀದಿಸಿಕೊಂಡು ಬರುವ ಹವ್ಯಾಸ ಇವರದು. ತಮಗೊಂದು ಹೊಸದೊ/ ಹಳೆಯದೊ ಪುಸ್ತಕ ಓದಬೇಕೇನಿಸಿದರೆ ಬಿಡುವ ಜಾಯಮಾನ ಇವರದಲ್ಲ. ಲೇಖಕ/ಪ್ರಕಾಶಕರಿಗೆ ಪತ್ರ ಬರೆದು ಇಲ್ಲವೆ ಒಬ್ಬರನ್ನು ಕಳಿಸಿ ಪುಸ್ತಕ ತರಿಸಿಕೊಂಡ ಅನೇಕ ನಿದರ್ಶನಗಳನ್ನು ತಮ್ಮ ಅನುಭವದ ಮೂಲಕ ಹಂಚಿಕೊಳ್ಳುತ್ತಾರೆ. ಇನ್ನೂ ಅನೇಕ ಸಲ ಹೀಗೂ ಆಗಿದೆಯಂತೆ. ಅದೇನೆಂದರೆ, ವಿಶ್ವ ವಿದ್ಯಾಲಯದ ಅಧ್ಯಾಪಕರಿಗೆ ಲೇಖನ ಬರೆಯಲು/ಭಾಷಣಕ್ಕೆ ಕೊರತೆ ಎನಿಸಿದಾಗ ಕಾ.ಹು. ಅವರನ್ನು ಸಂಪರ್ಕಿಸಿ ಮಾಹಿತಿ ಪಡೆದುಕೊಂಡಿದ್ದಾರೆ. ಆಸಕ್ತ ಓದುಗರಿಗೆ ಆತ್ಮೀಯರಿಗೆ, ಸಂಘ – ಸಂಸ್ಥೆಗಳಿಗೆ ಪುಸ್ತಕಗಳನ್ನು ನಿರಂತರವಾಗಿ ಕೊಡುತ್ತಾ ಬಂದಿದ್ದರೂ ಪುಸ್ತಕದ ಮನೆ ಇನ್ನೂ ಸೊರಗಿಲ್ಲವೆಂದೆ ಹೇಳಬೇಕು. ಓದುವ ವಿದ್ಯಾರ್ಥಿಗಗಳು

ಪಾಠ ಮಾಡುವ ಅಧ್ಯಾಪಕರ ಕೈಯಲ್ಲಿ ಒಂದು ಪುಸ್ತಕ ಇರುವುದಿಲ್ಲ, ಆದರೆ ಈ ರೈತ ಸಾಹಿತಿ ಕಾ.ಹು. ಬಿಜಾಪೂರ ಊರಿಗೆ/ಹೊಲಕ್ಕೆ ಹೊರಟರೂ ಕೈಯಲ್ಲಿ ಒಂದು ಪುಸ್ತಕ ದಿನಪತ್ರಿಕ ಹಿಡಿದು ಹೊರಟು ನಿಲ್ಲುತ್ತಾರೆಂದರೆ ಅವರ 'ಪುಸ್ತಕ ಓದು; ಪ್ರೇಮ ಎಷ್ಟಿತ್ತೆಂಬುದು ಅವ್ಯಕ್ತ ಸಂಗತಿ. ಇಷ್ಟೆಲ್ಲ ಪುಸ್ತಕ ಸಂಗ್ರಹ, ಓದು ಮತ್ತು ವಿಚಾರ ಸಂಕಿರಣದ ಉಪನ್ಯಾಸ ಕೇಳುವುದರ ಮೂಲಕ ಇವರೊಬ್ಬ ಸಾಹಿತಿಯಾಗಿ ಹೊರ ಹೊಮ್ಮಲು ಸಾಧ್ಯವಾಯಿತು.

**ಕನ್ನಡ ಪ್ರೇಮ :**

ಕಾಸೀಮಸಾಬ ಬಿಜಾಪೂರ ಅವರ ಮಾತೃ ಭಾಷೆ ಉರ್ದುವಾದರೂ 'ಕನ್ನಡವೆಂದರೆ ಅವರಿಗೆ ಪಂಚ ಪ್ರಾಣ. ಕನ್ನಡಕ್ಕಾಗಿ ಕೈ ಎತ್ತು ನಿನ್ನ ಕೈ ಕಲ್ಪವೃಕ್ಷವಾಗುವುದು, ಕನ್ನಡಕ್ಕಾಗಿ ಕೊರಳೆತ್ತು ಪಾಂಚ ಜನ್ಯ ಮೊಳಗುವುದು ಎಂಬ ರಸಋಷಿ ಕುವೆಂಪು ಅವರ ವಾಣಿಯನ್ನು ನಿತ್ಯ ನಡೆ-ನುಡಿಯಲ್ಲಿ ಅನುಸರಿಸಿದವರು. ಕನ್ನಡ ಸಾಹಿತ್ಯ-ಸಂಸ್ಕೃತಿ ಕುರಿತು ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ಆಯೋಜಿಸುತ್ತ ಬಂದವರು ಕನ್ನಡವನ್ನೇ ಉಸಿರಾಗಿಸಿಕೊಂಡ ಕನ್ನಡ ಪ್ರೇಮ, ಅಭಿಮಾನ ಅವರಲ್ಲಿತ್ತು. ಕನ್ನಡಕ್ಕೆ ಅನ್ಯಾಯವಾದಲ್ಲೆಲ್ಲ ಹೋಗಿ ಪ್ರತಿಭಟಿಸುವ ದಿಟ್ಟತನ ಮನೋಭಾವ ಅವರದು. ಸದಾ 'ನಡೆ ಕನ್ನಡ -ನುಡಿ ಕನ್ನಡ' ವ್ಯಕ್ತಿ ಅವರು.

**ಜಾನಪದ ಮಹಾಚೇತನ :**

ಬಾಲ್ಯದಿಂದಲೂ ಜನಪದ ಸಾಹಿತ್ಯದ ಬಗೆಗೆ ಒಲವು ಇರುವುದರಿಂದ ಜನಪದ ಸಾಹಿತ್ಯ ಸಂಗ್ರಹ, ಪ್ರಕಟನೆಯ ಕೆಲಸವನ್ನು ಬಹು ಆಸ್ಥೆಯಿಂದ ಮಾಡಿದರು. ಸಾಂದರ್ಭಿಕವಾಗಿ ಸುಗ್ಗಿಯ ಸಮಯದಲ್ಲಿ ಹಂತಿಯ ಹಾಡುಗಳನ್ನು, ಗ್ರಾಮದ ಜಾತ್ರೆ, ಮೊಹರಂ ಸಮಯದಲ್ಲಿ ಗೀಗೀ, ಡೊಳ್ಳು, ಲಾವಣಿ, ಕರ್ಬಲ್ ಹಾಡುಗಳನ್ನು ಬರೆದರು; ಹಾಡಿದರು; ಸಂಗ್ರಹಿಸಿದರು. 'ಜನವಾಣಿಯೇ ಬೇರು, ಕವಿವಾಣಿಯೇ ಹೂವಿ'ನಂತಿರುವ ಜನಪದ ಸಾಹಿತ್ಯವನ್ನು ಉಳಿಸಿ ಬೆಳೆಸುವಲ್ಲಿ ತುಂಬಾ ಶ್ರಮಿಸಿದರು. 'ಜಾನಪದ ಪ್ರತಿಭಾ ಪ್ರಕಾಶನ' ಆರಂಭಿಸಿ ಈಶ್ವರಚಂದ್ರ ಚಿಂತಾಮಣಿಯವರ 'ಜ್ಯೋತಿಯೇ ಆಗು ಜಗಕ್ಕೆಲ', ಹಾಗೂ ಸಿಂಪಿ ಲಿಂಗಣ್ಣನವರ 'ಗಾದೆಗಳ ಗಾರುಡಿ', ಅವರು ಸಾಹಿತಿ, ಲೇಖಕರಾಗಿರುವುದರಿಂದ 'ಮನಗೂಳಿಯ ಮಾಣಿಕ್ಯ 'ಮಾಧ್ಯಮಿಕ ಶಾಲೆಯ ರಜತ ಮಹೋತ್ಸವ ನೆನಪಿಗಾಗಿನ 'ಗೊಳಸಂಗಿ ಗೌರವ' ಗ್ರಂಥಗಳನ್ನು ಪ್ರಕಟಿಸಿದರು. ಕಾ. ಹು ಅವರು ಬರೆದ 'ಪಿ. ಧೂಲಾ ಸಾಹೇಬ' ಎಂಬ ಕಿರು ಗ್ರಂಥವನ್ನು ಕರ್ನಾಟಕ ಜಾನಪದ ಪರಿಷತ್ತು ಪ್ರಕಟಿಸಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ತಾಲೂಕಾ ಮತ್ತು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನಗಳಲ್ಲಿ ಜನಪದ ಸಾಹಿತ್ಯ ಕುರಿತು ೧೨ ಕ್ಕೂ ಹೆಚ್ಚು ಮೌಲಿಕ ಪ್ರಬಂಧಗಳನ್ನು ಮಂಡಿಸಿದ್ದಾರೆ. ೩೦೦ ಕ್ಕೂ ಹೆಚ್ಚು ಸಭೆ ಸಮಾರಂಭಗಳಲ್ಲಿ ಉಪನ್ಯಾಸ ನೀಡಿದ್ದಾರೆ. ಇವರ ಉಪನ್ಯಾಸಗಳು ಯಾವುದೇ ವಿಶ್ವವಿದ್ಯಾಲಯದ ಉಪನ್ಯಾಸಕರಿಗಿಂತ ಕಡಿಮೆ ಇದ್ದವುಗಳಲ್ಲವೆಂಬುದು ನಾಡಿನ ಕೇಳುಗರ ಅಭಿಪ್ರಾಯ. ಅಂತಹ ಜಾನಪದ ವಿದ್ವಾಂಸ ಕಾ.ಹು. ಅವರ ಕೆಲವು ಪ್ರಬಂಧಗಳು ಅಲ್ಲಲ್ಲಿ ಪ್ರಕಟಗೊಂಡಿವೆ. ಇಪ್ಪತ್ತಕ್ಕೂ ಜನಪದ ಸಾಹಿತಿಗಳ ಪರಿಚಯವನ್ನು ಬರೆದಿದ್ದಾರೆ. ಜಾನಪದ ಪ್ರತಿಭಾ ಪ್ರಕಾಶನದಿಂದ ೮೦ ಕ್ಕೂ ಹೆಚ್ಚು ಜನ ಸಾಹಿತಿ ಕಲಾವಿದರನ್ನು ಸತ್ಕರಿಸಿ ಗೌರವಿಸಿದ ಕೀರ್ತಿ ಕಾ.ಹು. ಅವರಿಗೆ ಸಲ್ಲಬೇಕು.

ಕಾ.ಹು. ಅವರು ಒಂದು ರೀತಿಯಲ್ಲಿ ಜಾನಪದ ಖಣಿ, ಶಬ್ದಭಂಡಾರವಿದ್ದಂತೆ. ಉತ್ತರ ಕರ್ನಾಟಕ ಕ್ಷೇತ್ರ ಜಾನಪದ ಅಧ್ಯಯನಕ್ಕೆ ಯಾವುದೇ ಸಾಹಿತಿ–ಸಂಶೋಧಕರು ಬರಲಿ, ಅವರು ಕಾ.ಹು. ಅವರನ್ನು ಕಾಣಲೇಬೇಕು. ಇಲ್ಲದೇ ಹೋದರೆ ಆ ಪ್ರಬಂಧ–ಅವರ ಅಧ್ಯಯನ ಅಪೂರ್ಣವೆಂದೇ ಭಾವಿಸಬೇಕು. ನಿದರ್ಶನಕ್ಕಾಗಿ ಹೇಳುವುದಾದರೆ ದಿ॥ ಪಿ. ಆರ್. ತಿಪ್ಪೇಸ್ವಾಮಿಯವರು, ಕ್ಯಾತನಹಳ್ಳಿ ರಾಮಣ್ಣ, ಡಾ. ಶ್ರೀ ರಾಮ ಇಟ್ಟಣ್ಣವರ ಮೊದಲಾದ ವಿದ್ವಾಸಂರಿಗೆ ವಿಫುಲ ಮಾಹಿತಿಯನ್ನು ಒದಗಿಸಿದ್ದಾರೆ.ಹಾಗೂ ವಾರ್ತಾ ಮತ್ತು ಪ್ರಚಾರ ಇಲಾಖೆಯ ವತಿಯಿಂದ ಮಕ್ಕಳ ಜನಪದ ಆಟಗಳ ಸಾಕ್ಷ್ಯ ಚಿತ್ರದ ಚಿತ್ರೀಕರಣಕ್ಕಾಗಿ ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಟಿ.ಎಸ್. ನಾಗಾಭರಣರು ಗೊಳಸಂಗಿ ಗ್ರಾಮಕ್ಕೆ ಬಂದಾಗ, ಶಾಲಾ ಮಕ್ಕಳನ್ನು ಕೂಡಿಸಿ, ಗೀತರೂಪದ ಆಟಗಳನ್ನು ಕಲಿಸಿ, ಸಹಕರಿಸಿದ್ದು ಅಪೂರ್ವ ದಾಖಲೆಯಾಗಿ ಉಳಿದಿದೆ. ಮತ್ತು ಜಾನಪದ ಪ್ರತಿಭಾ ಪ್ರಕಾಶನದ ಮೂಲಕ ಜನಪದ ಸಾಹಿತ್ಯ ಹಾಗೂ ಸಂಸ್ಕೃತಿಗೆ ಸಂಬಂಧಿಸಿದಂತೆ ೧೫೦ ಕ್ಕೂ ಹೆಚ್ಚು ಅರ್ಥಪೂರ್ಣ ಕಾರ್ಯಕ್ರಮಗಳನ್ನು ಗ್ರಾಮೀಣ ಪ್ರದೇಶದ ಜಾನಪದರ ಸಹಕಾರದೊಂದಿಗೆ ಹಮ್ಮಿಕೊಳ್ಳುತ್ತ ಬಂದಿರುವುದು ಹೆಮ್ಮೆ ಪಡುವ ಸಂಗತಿಯಾಗಿದೆ. ಕಾ.ಹು. ಬಿಜಾಪೂರ ಅವರು ಜನಪದ ಸಾಹಿತ್ಯದಲ್ಲಿ ಮಾಡಿದ ಸೇವೆಯನ್ನು ಕಂಡು 'ಜಾನಪದ ಚೇತನ' ಎಂದು ಬಿರುದು ನೀಡಿ ಗೌರವಿಸಿದ್ದಾರೆ. ಹಾಗೆಯೇ ನಿರಂತರ ಐದು ದಶಕಗಳ ಜನಪದ ಸಾಹಿತ್ಯ ಸಂಗ್ರಹ –ಸಂಶೋಧನೆ, ಅಧ್ಯಯನಕ್ಕಾಗಿ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಇವರನ್ನು ಜಾನಪದ ಪ್ರವರ್ಧಕ ಎಂಬ ಪ್ರಶಸ್ತಿ ನೀಡಿ ಗೌರವಿಸಿದೆ.

ಜಾನಪದ ಕ್ಷೇತ್ರದಲ್ಲಿ ಕೆಲಸ ಮಾಡಿದಂತೆ ಕಾ.ಹು. ಸೃಜನಶೀಲ ಸಾಹಿತಿಗಳೂ

ಹೌದು. ಬಾಲದಲ್ಲಿಯೇ ಸಾಹಿತ್ಯ ಸಂಸ್ಕೃತಿಯ ಪರಿಸರ ಪ್ರಭಾವ ಇವರ ಮೇಲಾಗಿರುವುದರಿಂದ ಸಾಂದರ್ಭಿಕವಾಗಿ ಗೇಯ ಗೀತೆ, ಜನಪ್ರಿಯ ಗೀತೆಗಳನ್ನು ಮತ್ತು ನಾಟಕಗಳನ್ನು ಬರೆಯುತ್ತ ಸಾಹಿತ್ಯ ಕ್ಷೇತ್ರಕ್ಕೆ ಬಂದರು.

**ಸಾಹಿತ್ಯ ಕೃಷಿ :**

ಕಾ.ಹು. ಅವರು ಬರೆದ ಕೃತಿಗಳೆಂದರೆ, 'ಮನೆಗೆ ಬೆಳಕು ಮಡದಿ', 'ಹೆಂಡತಿಯ ಕೈಗೊಂಬೆ' (ಸಾಮಾಜಿಕ,) ಗಡಿ, ತಂಟೆ, (ರಾಷ್ಟ್ರೀಯ), 'ಸಾಮ್ರಾಟ ಅಶೋಕ' (ಐತಿಹಾಸಿಕ) ನಾಟಕಗಳನ್ನು ಬರೆದರು. ಹಾಗೂ 'ಮಕ್ಕಳೆರಡೇ ಇರಲಿ', 'ಯುದ್ಧ ಸಾಕು ಶಾಂತಿ ಬೇಕು', 'ರೈತರ ಗೋಳು' ಎಂಬ ಏಕಾಂಕ ನಾಟಕಗಳನ್ನು ಬರೆದಿದ್ದಾರೆ. ಈ ಎಲ್ಲ ನಾಟಕಗಳು ರಂಗದ ಮೇಲೆ ಯಶಸ್ವಿ ಪ್ರಯೋಗ ಕಂಡಿವೆ. ಕಾ.ಹು. ಅವರಿಗೆ ವೃತ್ತಿ ರಂಗಭೂಮಿ ನಾಟಕಗಳ ಬಗೆಗೆ ಅಪಾರ ಜ್ಞಾನ–ಅಭಿಮಾನ ಇರುವುದು ಕಂಡುಬರುತ್ತದೆ.

'ದಾಂಪತ್ಯ ದೀಪ್ತಿ,' 'ಪಿ. ಧೂಲಾ' 'ಮನಗೂಳಿ ಮಾಣಿಕ್ಯ' ಇವಲ್ಲದೆ 'ಚಿಮ್ಮಲಗಿಯ ಚಿನ್ಮಯ' ಸ್ಮರಣ ಸಂಚಿಕೆ, ಅಭಿನಂದನಾ ಗ್ರಂಥಗಳನ್ನು ಸಂಪಾದಿಸಿದ್ದಾರೆ. 'ನೇಗಿಲ ಯೋಗಿ' ಕಾವ್ಯ ನಾಮದ ಮೂಲಕ ಅನೇಕ ಕವಿತೆಗಳನ್ನು ಬರೆದಿದ್ದಾರೆ. ಅವು ನಾಡಿನ ಕೆಲವು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಕಾ.ಹು. ಅವರ ಈ ಎಲ್ಲ ಸಾಧನೆ ಗಮನಿಸಿ ಬಸವನ ಬಾಗೇವಾಡಿ ತಾಲೂಕ ಕನ್ನಡ ಸಾಹಿತ್ಯ ಸಮ್ಮೇಳನದ ಸರ್ವಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಸಲ್ಲಿಸಿದ್ದು ಗಮನಾರ್ಹ. ಇದು ಕಾ.ಹು. ಅವರು ಕನ್ನಡ ಸಮಾಜಕ್ಕಾಗಿ ದುಡಿದ್ದಕ್ಕೆ ಸಂದ ನಿಜವಾದ ಗೌರವ ಎನ್ನಬೇಕು.

ಕಾ.ಹು. ಬಿಜಾಪೂರ ಅವರ ಸಾಹಿತ್ಯ ಕೃಷಿ ಸ್ವತಂತ್ರ ಹಾಗೂ ಸಂಪಾದಿತ ಎಂದು ಎರಡು ಬಗೆಯಲ್ಲಿ ವಿಂಗಡಿಸಬಹುದಾಗಿದೆ.

**ಸ್ವತಂತ್ರ ಕೃತಿಗಳು :**

ಕಾ.ಹು. ಬಿಜಾಪೂರ ಅವರ ಏರು ಜವ್ವನದ ಕಾಲವೆಂದರೆ ಅದು ಗ್ರಾಮೀಣ ಪರಿಸರದಲ್ಲಿ ರಂಗಭೂಮಿ ಅಭಿವೃದ್ಧಿಯ ಯುಗ. ಹೀಗಾಗಿ ಕಾ.ಹು. ಬಿಜಾಪೂರ ಸಹಜವಾಗಿ ನಾಟಕ ರಚನೆಯಲ್ಲಿ ತೊಡಗಿಕೊಂಡರು.

ಐತಿಹಾಸಿಕ ನಾಟಕವಾದ 'ಸಾಮ್ರಾಟ ಅಶೋಕ' ರಚನೆಯಾದದ್ದು ೧೯೭೧ ರಲ್ಲಿ. ಕಳಿಂಗ ಯುದ್ಧದ ರೂವಾರಿ ಅಶೋಕನ ಸುತ್ತ ಹೆಣೆಯಲ್ಪಟ್ಟ ನಾಟಕ ಇದು. ಆ ಕಾಲದ ಆಡಳಿತ, ಸಾಮಾಜಿಕ ವ್ಯವಸ್ಥೆ, ಸ್ತ್ರೀಯರ ಸ್ಥಾನ ಮಾನ ಕುರಿತು ಬೆಳಕು ಚೆಲ್ಲುತ್ತದೆ. ಧಾರ್ಮಿಕ ಪರಿವರ್ತನೆಯ ಮತ್ತು ಐತಿಹಾಸಿಕ

ಪ್ರಜ್ಞೆಯ ನೆಲೆಯಲ್ಲಿ ಮೂಡಿ ಬಂದ ಈ ನಾಟಕದಲ್ಲಿ ಕಳಿಂಗ ಯುದ್ಧದಲ್ಲಿ ಜಯಶಾಲಿಯಾದ ಅಶೋಕ ಚಕ್ರವರ್ತಿ ಯುದ್ಧದಿಂದ ಸಾವು-ನೋವು ಕಂಡು ಮನನೊಂದು ಶಸ್ತ್ರಾಸ್ತ್ರ ಬಿಟ್ಟು ಮಗನಾದ ಕಣಾಲನಿಗೆ ಪಟ್ಟಾಭಿಷೇಕ ಮಾಡಿ ಬೌದ್ಧ ಧರ್ಮ ಪ್ರಚಾರ ಕಾರ್ಯದಲ್ಲಿ ತೊಡಗುತ್ತಾನೆ. ಇಂತಹ ಮೊದಲಾದ ಇತಿಹಾಸದ ಪ್ರಸಂಗಗಳನ್ನು ಚಿತ್ರಿಸುವ ಈ ನಾಟಕ ೧೯೭೨ ರಲ್ಲಿ ವಿಜಾಪೂರ ಜಿಲ್ಲಾ ಪ್ರಥಮ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಯಶಸ್ವಿ ಪ್ರಯೋಗ ಕಂಡಿತು.

ರಾಷ್ಟ್ರೀಯ ನಾಟಕ ಎನ್ನಲಾದ ಗಡಿತಂಟೆ ಮೊದಲ ಪ್ರಯೋಗವಾದದ್ದು ೧೯೬೨ ರಲ್ಲಿ

"ಭಾರತಾಂಬೆ ನಮ್ಮ ಮಾತೆ
ಜೀವಕ್ಕಿಂತ ಮೇಲು
ಜೀವಕ್ಕಿಂತ ಮೇಲು ನಮ್ಮ
ಪ್ರಾಣಕ್ಕಿಂತ ಮೇಲು"

ಎಂಬ ದೇಶ ಭಕ್ತಿ ಗೀತೆಯೊಂದಿಗೆ ಆರಂಭವಾಗುವ ಈ ನಾಟಕವು ಚೀನಾದ ದಾಳಿಯನ್ನು ವಸ್ತುವಾಗಿರಿಸಿಕೊಂಡಿದೆ. ಚೀನಾ ದಾಳಿಯೊಂದಿಗೆ ಆರಂಭವಾಗಿ ಭರತ ಮತ್ತು ವಿಜಯರು ಯುದ್ಧಕ್ಕೆ ಹೊರಡುವ ದೃಶ್ಯದೊಂದಿಗೆ ಮುಕ್ತಾಯವಾಗುತ್ತದೆ. ಭಾರತ ಚೀನಾ ದೇಶಗಳ ಮೈತ್ರಿ ಬೃಹತ್ ಕಾಂಗ್ರೇಸ್‌ದ ಉನ್ನತ ಧ್ಯೇಯ, ರಾಷ್ಟ್ರ ರಕ್ಷಣೆ, ಭಾರತೀಯರ ನಿಸ್ಸೀಮ ದೇಶಭಕ್ತಿ, ಭಾವೈಕ್ಯ ಭೋದನೆ, ದೇಶದ್ರೋಹಿಗಳ ಸ್ವಾರ್ಥ, ರಾಷ್ಟ್ರ ರಕ್ಷಣೆಯಲ್ಲಿ ಬಿಜಾಪೂರ ಜಿಲ್ಲೆಯು ನಿರ್ವಹಿಸಿದ ಪಾತ್ರ, ಅನುಕರಣೀಯವಾದುದು.ಎರಡು ಮನೆತನಗಳಲ್ಲಿ ಹೊಲಗಳಗಡಿಗಾಗಿ ಆನುವಂಶಿಕವಾಗಿ ಬೆಳೆದು ಬಂದ ತಂಟೆ, ದ್ವೇಷ, ಅದು ಪ್ರೇಮದಲ್ಲಿ ಪರ್ಯವಸಾನ ಹೊಂದಿ ರಾಷ್ಟ್ರ ರಕ್ಷಣೆಗಾಗಿ ಸರ್ವಸ್ವವನ್ನು ತ್ಯಾಗ ಮಾಡುವ ವೀರ ರಸ ಪ್ರಧಾನ ಸನ್ನಿವೇಷಗಳು ಈ ನಾಟಕದಲ್ಲಿ ಚಿತ್ರಿತವಾಗಿವೆ. ಈ ನಾಟಕ ಯುವಕರಲ್ಲಿ ರಾಷ್ಟ್ರ ಪ್ರೇಮ ಬೆಳೆಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ದೇಶಭಕ್ತಿ ಗೀತೆಯೊಂದಿಗೆ ಆರಂಭವಾದ ನಾಟಕವು ಯುದ್ಧಗೀತೆಯೊಂದಿಗೆ ಮುಕ್ತಾಯವಾಗುತ್ತದೆ.

ಕಾ.ಹು. ಬಿಜಾಪೂರ ಅವರು ಬರೆದ ಪ್ರಥಮ ವ್ಯಕ್ತಿ ಪರಿಚಯ ಕೃತಿ ಎಂದರೆ 'ಪಿ.ಧೂಲಾಸಾಹೇಬ' ಅವರದ್ದು . ಪ್ರಸ್ತುತ ಕೃತಿಯನ್ನು ಜಾನಪದ ಪರಿಷತ್ತು, ಬೆಂಗಳೂರ ಇವರು ಪ್ರಕಟಿಸಿದ್ದಾರೆ. ೩೨ ಪುಟಗಳನ್ನು ಒಳಗೊಂಡ ಪುಟ್ಟ ಕೃತಿ ೨೦೦೮ ರಲ್ಲಿಯೇ ಪ್ರಕಟಗೊಂಡಿದೆ. ಕರ್ನಾಟಕ ಜಾನಪದ ಪರಿಷತ್ತಿನ

ಅಧ್ಯಕ್ಷರಾದ ಜಿ.ನಾರಾಯಣ ಅವರು ಪ್ರಸ್ತುತ ಕೃತಿಗೆ 'ಮುನ್ನಡಿ' ಬರೆದಿದ್ದಾರೆ. ಇದರ ಮುಖಪುಟವು ಧೂಲಾಸಹೇಬರ ಭಾವಚಿತ್ರವನ್ನು ಒಳಗೊಂಡಿದೆ.

ಮಧುರಚೆನ್ನರಿಗಿಂತ ಎರಡು ವರ್ಷ ಹಿರಿಯರಾದ ಪಟೇಲ ಧೂಲಾಸಾಹೇಬ ಅವರ ಸಂಕ್ಷಿಪ್ತ ಪರಿಚಯವನ್ನು ಪ್ರಸ್ತುತ ಕೃತಿಯು ತಿಳಿಸುತ್ತದೆ. ಧೂಲಾ ಅವರ ಹೆಸರು ಕಾಶೀಮ್‌ಸಾಹೇಬ. 'ಧೂಲಾ' ಎಂದರೆ ಪಾರ್ಸಿ ಭಾಷೆಯಲ್ಲಿ 'ಮಧುಮಗ' ಎಂದು ಅರ್ಥ. ಆದರೆ ಧೂಲಾಸಾಹೇಬರು ಬ್ರಹ್ಮಚಾರಿಗಳಾಗಿದ್ದರು.

ಸಿಂಪಿ ಲಿಂಗಣ್ಣ, ಮಧುರಚೆನ್ನರ ಸಮಕಾಲೀನರಾದ ಹಲಸಂಗಿ ಗೆಳೆಯರಲ್ಲೊಬ್ಬರಾದ ಪಿ.ಧೂಲಾ ಅವರ ಜೀವನ ಹಾಗೂ ಜನಪದ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆ, ಅವರು ಮಾಡಿದ ಸಾಧನೆಯನ್ನು ಈ ಕೃತಿ ಒಳಗೊಂಡಿದೆ. ಕೇವಲ ೩೯ ವರ್ಷ ಬದುಕಿ ಬಾಳಿದ ಧೂಲಾ ಅವರು ಜೀವನದಲ್ಲಿ ಪಟ್ಟ ಶ್ರಮವನ್ನು ಇಲ್ಲಿ ಸ್ಮರಿಸಲಾಗಿದೆ. ಧೂಲಾ ಅವರು ಶಾಲೆಯಲ್ಲಿ ಓದಿದ್ದು ೩ನೇ ತರಗತಿಯಾದರೂ ಮುಲ್ಕಿ ಪರೀಕ್ಷೆ ಪಾಸು ಮಾಡಿಕೊಂಡರು.

ಪಿ. ಧೂಲಾ ಅವರು 'ವೀರ ಪಥಿಕ' ಎಂಬ ಕೃತಿ ರಚನೆ, ಮಾಡಿದ್ದು, ಅದನ್ನು ಈ ಕೃತಿಯಲ್ಲಿ ವಿಮರ್ಶೆ ಮಾಡಲಾಗಿದೆ. ಈ ವಿಮರ್ಶೆಯು ಸಾಧಕನೊಬ್ಬನು ತನ್ನ ದಾರಿಯಲ್ಲಿ ಬರುವ ಎಡರು ತೊಡರುಗಳನ್ನು ಬದಿಗೆ ತಳ್ಳುತ್ತ ಗುರಿಯೆಡೆಗೆ ಸಾಗುವ ಹಾಗೂ ಆ ಸಾಧನೆಯಿಂದ ಹೊಸ ವ್ಯಕ್ತಿತ್ವವನ್ನು ರೂಪಿಸಿಕೊಳ್ಳುವಂತೆ ಮಾಡುತ್ತದೆ. 'ವೀರ ಪಥಿಕ'ವು ಧೂಲಾ ಅವರ ಜೀವನವನ್ನೇ ಒಳಗೊಂಡಿದೆ ಎಂದು ಹೇಳಲಾಗಿದೆ.

ಒಟ್ಟಿನಲ್ಲಿ 'ಪಿ.ಧೂಲಾ ಸಾಹೇಬ' ಇದು ವ್ಯಕ್ತಿ ಚಿತ್ರಣ ಕೃತಿ. ನವೋದಯ ಸಾಹಿತ್ಯ ಸಂದರ್ಭದಲ್ಲಿ ಕಾಣಿಸಿಕೊಂಡ ಉತ್ತರ ಕರ್ನಾಟಕದ ಗ್ರಾಮೀಣ ಪ್ರತಿಭೆ ಧೂಲಾ ಸಾಹೇಬರ ಬದುಕು ಬರಹ-ಸಾಧನೆ ಪರಿಚಯಿಸುವ ಉತ್ತಮ ಕೃತಿ ಇದಾಗಿದೆ.

**ಸಂಪಾದಿತ ಕೃತಿಗಳು :**

ಕಾ.ಹು. ಬಿಜಾಪೂರ ಸೃಜನಶೀಲ ಸಾಹಿತಿಯಾಗಿರುವಂತೆ ಸಂಪಾದಕರಾಗಿಯೂ ಕೂಡಾ ಸಾಹಿತ್ಯ ಕ್ಷೇತ್ರಕ್ಕೆ ತಮ್ಮ ಸೇವೆಯನ್ನು ಅರ್ಪಿಸಿದ್ದಾರೆ. ಅವರ ಸಂಪಾದನಾ ಕಾರ್ಯ ಎರಡು ರೀತಿಯದು. ಒಂದು ಸ್ಮರಣ ಸಂಚಿಕೆಗಳ ಪ್ರಧಾನ ಸಂಪಾದಕತೆ, ಇನ್ನೊಂದು ಸಹಸಂಪಾದಕತ್ವ ಮುಂತಾದವುಗಳು. ಪ್ರಧಾನ ಸಂಪಾದಕರಾಗಿ ಪ್ರಕಟಿಸಿದ ಕೃತಿಗಳೆಂದರೆ, ಗೊಳಸಂಗಿಯ ಸರಕಾರಿ ಕನ್ನಡ ಪ್ರಾಥಮಿಕ ಶಾಲೆಯ ಶತಮಾನೋತ್ಸವ ಸ್ಮರಣ ಸಂಚಿಕೆ(೧೯೭೯); 'ಚಿಮ್ಮಲಗಿ-ಚಿನ್ಮಯ' (೨೦೦೧).

ಸ್ಮರಣ ಸಂಚಿಕೆಗಳು ಒಂದು ರೀತಿಯ ಸಂಪಾದನೆಯಾದರೆ, ಸಹ ಸಂಪಾದಕರಾಗಿ 'ದಾಂಪತ್ಯ ದೀಪ್ತಿ' (೨೦೦೫), ಜಾನಪದ ಪ್ರತಿಭಾ ಪ್ರಕಾಶನದ ಮೂಲಕ 'ಜ್ಯೋತಿಯೆ 'ಆಗು ಜಗಕ್ಕೆಲ್ಲ' (ಸಂ-ಈಶ್ವರ ಚಂದ್ರ ಚಿಂತಾಮಣಿ) 'ಗಾದೆಗಳ ಗಾರುಡಿ' (ಸಿಂಪಿ ಲಿಂಗಣ್ಣ); 'ಮನಗೂಳಿ ಮಾಣಿಕ್ಯ' (೨೦೦೬); 'ಗೊಳಸಂಗಿ ಗೌರವ' (೨೦೦೭) ಕೃತಿಗಳನ್ನು ಪ್ರಕಟಿಸಿದ್ದಾರೆ.

ಇವುಗಳೊಂದಿಗೆ ಬಿಡಿಯಾಗಿ ಅನೇಕ ಲೇಖನಗಳನ್ನು ಕಾ.ಹು. ಬಿಜಾಪೂರ ಅವರು ಬರೆದಿದ್ದಾರೆ. 'ಸರ್ವಧರ್ಮ ಸೌಹಾರ್ದ; 'ಸಂಸ್ಕೃತಿಯ ಹರಿಕಾರರು'; 'ನರಗುಂದದ ಬಾಬಾ ಸಾಹೇಬರ ಸ್ಮಾರಕ ಈಗ ಅನಾಥ' ಅನೇಕ ಲೇಖನಗಳನ್ನು ಸಾಂದರ್ಭಿಕವಾಗಿ ಬರೆದು ದಿನ ಪತ್ರಿಕೆಗಳಲ್ಲಿ ಪ್ರಕಟಿಸಿದ್ದಾರೆ.

**ಕೃಷಿ ಪರಿಸರ :**

'ರೈತ ಈ ದೇಶದ ಬೆನ್ನಲುಬು. ರೈತ ಉಳಿದರೆ ದೇಶ ಉಳಿದೀತು'. ಎಂಬ ಮಾತುಗಳು ರೈತನ ವ್ಯಕ್ತಿತ್ವವನ್ನು ಇಮ್ಮಡಿಸುತ್ತವೆ. ಆದರೆ ವಾಸ್ತವಿಕವಾಗಿ ಹೆಚ್ಚು ಶೋಷಣೆಗೆ ಒಳಗಾದವನೆಂದರೆ ರೈತ. ವಿಶ್ವದಲ್ಲಿಯೇ ಹೆಚ್ಚು ಆತ್ಮಹತ್ಯೆ ಮಾಡಿಕೊಂಡ ರೈತರ ದೇಶ ಮತ್ತು ರಾಜ್ಯ ನಮ್ಮದಾಗಿದೆ.

ಭಾರತ ಹಳ್ಳಿಗಳ ದೇಶ. ನಮ್ಮದು ಕೃಷಿ ಪ್ರಧಾನವಾದ ದೇಶ. ಕಾಡಿನಿಂದ ನಾಡಿಗೆ ಬರುವಾಗ ಮಾನವ ಬೇಸಾಯ ಪದ್ಧತಿ ಅಳವಡಿಸಿಕೊಂಡದ್ದು ಒಂದು ಮಹತ್ವದ ಹಂತ. ಕೃಷಿಯ ಕಾಯಕವನ್ನು ಸರಿಯಾಗಿ ಸಮರ್ಥವಾಗಿ ಮಾಡಿದವರು ಸಾಮಾಜಿಕವಾಗಿ ಆರ್ಥಿಕವಾಗಿ ಸಾಕಷ್ಟು ಪರಿವರ್ತನೆ ಕಂಡುಕೊಂಡಿದ್ದರು. ಕಾ.ಹು. ಬಿಜಾಪೂರ ಹುಟ್ಟಿ ಬೆಳೆದಿದ್ದು ಕೃಷಿ ಪರಿಸರದ ಕುಟುಂಬದಲ್ಲಿ. ಕೃಷಿಯನ್ನು ಭಕ್ತಿ, ಪ್ರೀತಿಯಿಂದ ಮಾಡಿದವರಲ್ಲಿ ಇವರೂ ಒಬ್ಬರಾಗಿದ್ದಾರೆ.

"ವಿದ್ಯೆ ಪಡೆದು ಬುದ್ಧಿ ಗಳಿಸಿ ಹಳ್ಳಿ ಕಡೆಗೆ ಹೋಗುವೆ
ಹೊಲಕ್ಕೆ ಹೋಗಿ ನೆಲಕ್ಕೆ ಬಾಗಿ ನಾನು ರೈತನಾಗುವೆ."

ಎಂಬುದು ಕಾ.ಹು. ಅವರ ಕನಸು-ನನಸು. 'ಕಾಯಕವೇ ಕೈಲಾಸ' ಎಂಬುದು ಇವರ ಧ್ಯೇಯ. ಭೂತಾಯಿಯ ಮಗನಾಗಿ, ಮಣ್ಣಲ್ಲಿ ಮಣ್ಣಾಗಿ ದುಡಿಯುವ ದೇಹ-ಮನಸ್ಸು ಇವರದು. ಆಧುನಿಕ ಕೃಷಿ ವಿಧಾನವನ್ನು ಅನುಸರಿಸಿದರೂ ಸಾವಯುವ ಕೃಷಿಯನ್ನು ಬಿಟ್ಟವರಲ್ಲ. ಇವರು ಎಂಥ ಪ್ರಗತಿಪರ ರೈತರಾದವರೆಂದರೆ, ಪ್ರತಿಯೊಂದು ಬೆಳೆಯನ್ನು ಬೆಳೆಯುವಲ್ಲಿ ವಹಿಸುವ ಕಾಳಜಿ, ಶಿಸ್ತು, ಸಮಯ ಪರಿಪಾಲನೆ ಮೆಚ್ಚುವಂತಹದ್ದು. ಇವರು ಉಳ್ಳಿ ಅಗಿ, ಪಪ್ಪಾಯಿ, ಬದನೆ, ಬಾಳೆ,

ಉಳ್ಳಾಗಡ್ಡೆ ಬೆಳೆಯುತ್ತಾರೆಂದರೆ, ಜನ ' ಕಾಸೀಮಸಾಬರ ತ್ವಾಟಕ್ಕೆ ಹೋಗಿ ನೋಡಿ ಬರಬೇಕು' ಎನ್ನುವಂತಿರುತ್ತಿತ್ತು. ಇವರನ್ನು ಕಾಣಲು ಬಂದ ಬೀಗರು, ಗೆಳೆಯರು, ಸಾಹಿತಿಗಳು ತೋಟವನ್ನು ನೋಡದೇ ಹೋಗುತ್ತಿರಲಿಲ್ಲ. ಬಿಜಾಪೂರ ಕೃಷಿ ವಿಶ್ವವಿದ್ಯಾಲಯದ ಸಹಯೋಗದಲ್ಲಿ ತಮ್ಮ ತೋಟ ಮತ್ತು ಇತರರ ಹೊಲ/ ತೋಟಗಳಲ್ಲಿ ಅನೇಕ 'ಕ್ಷೇತ್ರೋತ್ಸವ' ಮಾಡಿದ ನಿದರ್ಶನಗಳಿವೆ.

ಕಾ.ಹು. ಅವರು ಪ್ರವೃತ್ತಿಯಿಂದ ಸಾಹಿತಿಯಾದಂತೆ ವೃತ್ತಿಯಿಂದ ಕೃಷಿಕರು. ಒಂದು ಕೈಯಲ್ಲಿ ಪೆನ್ನು ಇನ್ನೊಂದು ಕೈಯಲ್ಲಿ ನೇಗಿಲನ್ನು ಹಿಡಿದು ತಾಳ ಮೇಳಗಳೊಂದಿಗೆ ಸಾಗಿ ನಾಟ್ಯ ರಂಗಭೂಮಿ ಹಾಗೂ ಬೇಸಾಯ ರಂಗಭೂಮಿಗಳ ಸೇವೆಯಲ್ಲಿ ಪಳಗಿದವರು. ತಮ್ಮ ತೋಟಗಳಲ್ಲಿ ರಸವತ್ತಾದ ಹಣ್ಣು, ಕಾಯಿಪಲ್ಲೆ ಬೆಳೆದವರು. ಸ್ವತ: ನೆಟ್ಟು ಕಡಿದು, ನೇಗಿಲು ಹೂಡುವುದರಿಂದ ಹಿಡಿದು ಬಿತ್ತುವುದು, ನೀರು ಹಾಯಿಸುವುದು, ಕಣ–ರಾಶಿ ಮಾಡುವುದೆಂದರೆ ಕಾ.ಹು. ಅವರಿಗೆ ಹಿಗ್ಗು-ಹುರುಪು. 'ದುಡಿಮೆಯೇ ದೇವರೆಂದು' ತಿಳಿದ ಶ್ರಮ ಸಂಸ್ಕೃತಿಯ ಬುದ್ಧಿಜೀವಿ ಅವರೆಂಬುದನ್ನು ಯಾರೂ ಅಲ್ಲಗಳೆಯಾಲಗದು.

ಸದಾ ರೈತರ ಹಿತವನ್ನೇ ಬಯುಸುವ ಕಾ.ಹು. ಅವರು ತಮ್ಮೊಂದಿಗೆ ಸುತ್ತಲಿನ ರೈತರೂ ಕೃಷಿಯ ಅಭಿವೃದ್ಧಿ ಹೊಂದುವಂತೆ ಮಾರ್ಗದರ್ಶನ ನೀಡುವವರು. ಇವರ ತೋಟಗಾರಿಕೆ, ಕೃಷಿ ಪದ್ಧತಿಯನ್ನು ಗುರುತಿಸಿ ಗೊಳಸಂಗಿಯ ಸಿಂಡಿಕೇಟ್ ಬ್ಯಾಂಕಿನವರು 'ಆದರ್ಶ ರೈತ' ಎಂದು ಬಿರುದು ನೀಡಿ ಸನ್ಮಾನಿಸಿದ್ದಾರೆ. ಕಾ.ಹು. ಅವರು 'ಹೊಲದಲ್ಲಿ ನಿಂತರೆ ರೈತ, ಸಭೆಯಲ್ಲಿ ಬಂದು ಕುಳಿತರೆ ಸಾಹಿತಿ' ಎನ್ನುತ್ತಾರೆ ಅವರ ಗೆಳೆಯರ ಬಳಗದ ಸದಸ್ಯರು.

■

## ಸಂಘ-ಸಂಸ್ಥೆಗಳ ಸಂಸ್ಥಾಪಕರು

ಕಾ.ಹು. ಅವರಿಗೆ ಸಾಹಿತ್ಯ-ಸಂಸ್ಕೃತಿ-ಕಲೆ, ಸಂಗೀತವೆಂದರೆ ಪಂಚ ಪ್ರಾಣ. ಶಾಲೆ-ಕಾಲೇಜು,ಗ್ರಾಮದಲ್ಲಿ ಸಾಹಿತ್ಯ-ಸಾಂಸ್ಕೃತಿಕ ಪರಿಸರ ಇರಬೇಕೆಂಬುದು ಅವರ ಮಹದಾಸೆ ಇದೆ. ಇದೇ ಹಿನ್ನೆಲೆಯಲ್ಲಿ ಅನೇಕ ಸಂಘ-ಸಂಸ್ಥೆಗಳನ್ನು ಬೆಳೆಸಿದ ಶ್ರೇಯಸ್ಸು ಅವರದು.

ಗ್ರಾಮವೊಂದರ ಸರ್ವಾಂಗೀಣ ಅಭಿವೃದ್ಧಿಯಲ್ಲಿ ಸಂಘ-ಸಂಸ್ಥೆಗಳ ಪಾತ್ರ ತುಂಬಾ ಹಿರಿದಾದುದು. ಜನರನ್ನು ಸಂಘ-ಸಂಸ್ಥೆಗಳಲ್ಲಿ ತೊಡಗಿಸಿ ದುಡಿಯುವ ದುಡಿಸುವ ಆ ಮೂಲಕ ಗ್ರಾಮದ ಸರ್ವತೋಮುಖ ಅಭಿವೃದ್ಧಿಯ ಕನಸು ಕಾ.ಹು. ಅವರದು. ಇದಕ್ಕಾಗಿಯೇ ಊಟ-ನೀರು-ನಿದ್ರೆ ಬಿಟ್ಟು ಹಗಲಿರುಳು ದುಡಿದಿದ್ದನ್ನು ಅವರನ್ನು ಬಲ್ಲವರು ಹೇಳುತ್ತಾರೆ. ಅಂತಹ ಕ್ರಿಯಾಶೀಲ ವ್ಯಕ್ತಿತ್ವವುಳ್ಳವರೆಂದರೆ ತಪ್ಪಾಗದು.

'ಸಹಕಾರಂ ಗೆಲ್ಗೆ' ಎಂಬುದು ಭಾರತದ ಅಭಿವೃದ್ಧಿಯ ಸೂತ್ರ . ಸಹಕಾರ ತತ್ವದ ಅಡಿಯಲ್ಲಿ ವ್ಯಕ್ತಿ, ಊರು, ನಾಡು, ದೇಶ ಬೆಳೆಯಬೇಕೆಂಬ ಆಶಯದಂತೆ ಗ್ರಾಮವನ್ನು ಕಟ್ಟಬಯಸಿದರು.

**ಗ್ರಾಮ ಪಂಚಾಯತ ಸದಸ್ಯ :**

ಅದೇ ತಾನೇ ಮಾಧ್ಯಮಿಕ ಶಿಕ್ಷಣ ಮುಗಿಸಿಕೊಂಡು ತಮ್ಮ ಹುಟ್ಟೂರಿಗೆ ಬಂದ ಕಾ.ಹು. ಅವರ ರಚನಾತ್ಮಕ ಕಾರ್ಯ ಚಟುವಟಿಕೆಗಳನ್ನು ಗ್ರಾಮದ ಗುರು-ಹಿರಿಯರು ಗಮನಿಸಿ ಅವರನ್ನು ಗ್ರಾಮ ಪಂಚಾಯತಿಯ ಸದಸ್ಯರನ್ನಾಗಿ ಮಾಡಿದರು. ಅದು ಅವಿರೋಧವಾಗಿ ಆಯ್ಕೆ ಮಾಡಿರುವುದು ಗಮನಾರ್ಹ ಸಂಗತಿ. ಆ ಅವಧಿಯಲ್ಲಿ ಕಾ.ಹು. ಅವರು ಗ್ರಾಮಾಭಿವೃದ್ಧಿಯ ಎರಡು ಅವಧಿಯಲ್ಲಿ ಹಲವಾರು ರಚನಾತ್ಮಕ ಕೆಲಸಗಳನ್ನು ಮಾಡಿ ಜನಮನ ಗೆದ್ದರು.

**ಇಸ್ಲಾಂ ಕಮಿಟಿಯ ಕಾರ್ಯದರ್ಶಿ :**

ಗೊಳಸಂಗಿ ಗ್ರಾಮ ಮುಸ್ಲಿಂ ಜಹಗೀರದಾರ ಬಂಧುಗಳು ನಾಲ್ಕು ನೂರು

ವರ್ಷಗಳ ಹಿಂದೆ ಔರಂಗಜೇಬ ಚಕ್ರವರ್ತಿಯಿಂದ ೧೨೧ ಸರ್ವೆ ನಂಬರಗಳನ್ನು ಪಡೆದ ಗ್ರಾಮ. ಇದರಿಂದಾಗಿ ಈ ಗ್ರಾಮದಲ್ಲಿ ಮುಸ್ಲಿಂರ ಸಂಖ್ಯೆ ಹೆಚ್ಚಾಗಿದೆ. ಇಂತಹ ಇಸ್ಲಾಂ ಸಮಾಜದ ಕಮೀಟಿಯ ಕಾರ್ಯದರ್ಶಿಯಾಗಿ ಕಾ.ಹು. ಅವರು ಎರಡು ದಶಕಕ್ಕೂ ಹೆಚ್ಚು ಸಮಾಜದ ಸರ್ವತೋಮುಖ ಅಭಿವೃದ್ಧಿಗಾಗಿ ದುಡಿದರು. ದಾನಿಗಳಾದ ಫಿರ್‌ಜಾದೆ ಅವರು ಸಂಯುಕ್ತವಾಗಿ ತಮ್ಮ ಸ್ವಂತ ಹಣದಿಂದ ಕಟ್ಟಿಸಿದ ಭವ್ಯವಾದ ಜುಮ್ಮಾ ಮಸೀದಿಯ ನಿರ್ಮಾಣದ ಉಸ್ತುವಾರಿಯನ್ನು ಅಳಿಯ ಹಾಜಿ ಮುರ್ತುಜಸಾಹೇಬ ಹತ್ತರಕಿಹಾಳ ಅವರೊಂದಿಗೆ ಕೂಡಿ, ತುಂಬಾ ಕಾಳಜಿಯಿಂದ ಕಾರ್ಯವನ್ನು ಕಾ.ಹು. ಅವರು ನಿರ್ವಹಿಸಿದರು. ಹಾಗೆಯೇ ಉರ್ದು ಶಾಲೆಯ ನಾಲ್ಕು ಕೋಣೆಗಳನ್ನು ಕಟ್ಟಿಸುವಲ್ಲಿಯೂ ಇವರ ಶ್ರಮ ಕಡಿಮೆಯೇನಲ್ಲ. ಮೊಹರಂ ದೇವರ ಮಖಾನ ಕಟ್ಟಿಸಿದ್ದ ಭಗವಂತಪ್ಪ ಪವಾರ, ಚಂದಪ್ಪ ಕಾರಜೋಳ ಹಾಗೂ ದೋಂಡಿಬಾ ಜಾಧವ ಅವರನ್ನು ಇಸ್ಲಾಂ ಸಮಿತಿಯ ಪರವಾಗಿ ಸತ್ಕರಿಸುವಲ್ಲಿ ಕಾ.ಹು. ಅವರ ಪಾತ್ರ ಹಿರಿದಾದುದು ಎನ್ನಬೇಕು. 'ಹಿಂದು-ಮುಸ್ಲಿಂ ಭಾಯಿ-ಭಾಯಿ' ಎಂಬ ವಿಚಾರ ಸಂಕಿರಣವನ್ನು ಏರ್ಪಡಿಸಿದ್ದು ಗಮನಾರ್ಹ.

ಸರಕಾರದ ಸೌಲಭ್ಯಗಳನ್ನು ಜನರಿಗೆ ತಲುಪಿಸಿದರು ಸಮಗ್ರ ಗ್ರಾಮಾಭಿವೃದ್ಧಿಯ ಯೋಜನೆಗಳನ್ನು ಜಾರಿಗೊಳಿಸಿದರು. ಆದರ್ಶ ಗ್ರಾಮವನ್ನಾಗಿ ರೂಪಿಸಿದರು.

**ಯುವಕ ಮಂಡಳದ ಅಧ್ಯಕ್ಷ :**

'ಯುವ ಶಕ್ತಿ ದೇಶದ ಶಕ್ತಿ' ಯುವ ಶಕ್ತಿಯಿಂದ ಗ್ರಾಮಾಭಿವೃದ್ಧಿಯನ್ನು ಮಾಡಲು ಸಾಧ್ಯ, ಇದರಲ್ಲಿ ಯುವಕರ ಪಾತ್ರ ಅತ್ಯಂತ ಮಹತ್ತರವಾದುದು. ಇದನ್ನೆಲ್ಲ ಮನಗಂಡ ಗ್ರಾಮದ ಹಿರಿಯರು ಯುವಕ ಮಂಡಳಕ್ಕೆ ಚಾಲನೆ ನೀಡಿದರು. ಕಾ.ಹು. ಅವರು ಯುವಕ ಮಂಡಳದ ಸಂಸ್ಥಾಪಕ ಅಧ್ಯಕ್ಷರಾದರು.

ಅಧ್ಯಕ್ಷರಾದ ನಂತರ ಗ್ರಾಮದಲ್ಲಿ ಸಾಹಿತ್ಯಕ, ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಧಾರ್ಮಿಕ ಮೊದಲಾದ ಅಭಿವೃದ್ಧಿ ಪರ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಗೊಳಸಂಗಿ ಗ್ರಾಮ 'ಜಯಂತಿ ಗ್ರಾಮ' ಎಂದು ಸರಕಾರದಿಂದ ಮಾನ್ಯತೆ ಪಡೆಯುವಂತೆ ಮಾಡಿದರು.ಇದಕ್ಕಾಗಿ ಅವರ ನಿಸ್ವಾರ್ಥ ಸೇವೆಯನ್ನು ಎಷ್ಟು ಕೊಂಡಾಡಿದರೂ ಕಡಿಮೆಯೇ. ಯುವಕರನ್ನು ದಾರಿ ತಪ್ಪದ ರೀತಿಯಲ್ಲಿ ಮಾನವೀಯ, ಸಾಂಸ್ಕೃತಿಕ, ಮೌಲ್ಯಗಳನ್ನು, ದೇಶಾಭಿಮಾನವನ್ನು ಅಳವಡಿಸಿ ಕೊಳ್ಳುವಂತೆ ಸ್ಫೂರ್ತಿ ನೀಡಿ ಮಾರ್ಗದರ್ಶನ ಮಾಡುತ್ತಿದ್ದರು. ಇದರಿಂದಾಗಿ

ಗ್ರಾಮದಲ್ಲಿ ಒಂದು ಉತ್ಸಾಹದಿಂದ ಪಡೆಯನ್ನು ಕಟ್ಟಿ ಗ್ರಾಮದ ಏಳಿಗೆಗಾಗಿ ದುಡಿಯುತ್ತಿದ್ದರರು.

**ಹಾಲಿನ ಡೇರಿಯ ಸಂಸ್ಥಾಪಕ :**

ಆಗಿನ ಮಂಡಲ ಪಂಚಾಯತಿಯ ಪ್ರಧಾನರಾಗಿದ್ದ ದಿ॥ ಮಲ್ಲಪ್ಪ ಅಪ್ಪಣ್ಣಪ್ಪ ದಳವಾಯಿ ಅವರ ಜೊತೆಗೂಡಿ ಕಾ.ಹು. ಅವರು 'ಶ್ರೀ ಬಸವೇಶ್ವರ ಕಾಮಧೇನು ಹಾಲಿನ ಡೇರಿ' ಯನ್ನು ಸ್ಥಾಪಿಸಿದರು. ಅಂದಿನಿಂದ ಬಹಳ ದಿನಗಳವರೆಗೆ ನಡೆದು ಗ್ರಾಮೀಣ ಪ್ರದೇಶದಲ್ಲಿ 'ಕ್ಷೀರ ಕ್ರಾಂತಿ' ಮಾಡಿದ್ದು ಗಮನಾರ್ಹವಾದುದು. ಬಡವರ ಪಾಲಿಗೆ ಹೈನುಗಾರಿಕೆ ಸಂಜೀವಿನಿಯಾಯಿತು. ಪಶುಸಂಗೋಪನಾ ಪದ್ಧತಿ ಗ್ರಾಮದಲ್ಲಿ ಇಮ್ಮಡಿಸಿತು.

**ತಾಲೂಕಾ ಕ.ಸಾ.ಪ. ಅಧ್ಯಕ್ಷ :**

ಗ್ರಾಮೀಣ ಪರಿಸರದಲ್ಲಿ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ವಿಶಿಷ್ಟ ಕಾರ್ಯಕ್ರಮಗಳನ್ನು ಮಾಡಿದರು. ಡಾ. ದ: ರಾ. ಬೇಂದ್ರೆ, ಡಾ. ಸಿಂಪಿ ಲಿಂಗಣ್ಣ 'ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪ, ಕುವೆಂಪು, ಮೋಹರೆ ಹಣಮಂತರಾಯ. ಡಾ.ಬ. ಭಿ. ಹೊರಡಿ ಮೊದಲಾದವರ ಬದುಕು-ಬರಹ ಕುರಿತ ವಿಚಾರ ಸಂಕಿರಣಗಳನ್ನು ಮಾಡಿದ ಕೀರ್ತಿ ಇವರದು. ಹಾಗೂ ಜಾನಪದ ಸಾಹಿತ್ಯ, ಶರಣರ ವಚನ, ಶರೀಫರ ತತ್ವಪದ, ದಾಸರ ಕೀರ್ತನೆಗಳಲ್ಲಿ ಜೀವನ ಮೌಲ್ಯಗಳು ಕುರಿತಾದ ವಿಚಾರ ಸಂಕಿರಣವನ್ನು ಶಾಲಾ-ಕಾಲೇಜುಗಳಲ್ಲಿ ಏರ್ಪಡಿಸಿ, ವಿದ್ಯಾರ್ಥಿಗಳಲ್ಲಿ ಮಾನವೀಯ ಮೌಲ್ಯಗಳು ಅಳವಡುವಂತೆ ಮಾಡಿದವರು.

ಕಾ.ಹು. ಅವರು ಅಧ್ಯಕ್ಷರಾಗಿರುವ ಸಮಯದಲ್ಲಿ ಮೌಲಿಕವಾದ ೨೫ ಕ್ಕೂ ಹೆಚ್ಚು ಕಾರ್ಯಕ್ರಮಗಳನ್ನು ಮಾಡಿ ಗ್ರಾಮದಲ್ಲಿ ಸಾಹಿತ್ಯಕ ಪರಿಸರವನ್ನು ಉಂಟು ಮಾಡಿದವರು. ಸ್ವತ: ತಾವು ತಮ್ಮ ಕೈಯಾರೆ ಹಣ ಖರ್ಚು ಮಾಡಿ ಕಾರ್ಯಕ್ರಮ ಮಾಡಿದ್ದು ಕಾ.ಹು. ಅವರ ಕನ್ನಡಾಭಿಮಾನಕ್ಕೆ ಹಾಗೂ ಗ್ರಾಮದಲ್ಲಿ ಕೇಂದ್ರ ಗ್ರಂಥಾಲಯ ಸ್ಥಾಪನೆ ಸಾಧನೆಗೆ ಸಾಕ್ಷಿ.

ಸಮಾನ ಮನಸ್ಕ ಸಾಹಿತ್ಯಾಸಕ್ತರ ಸಹಯೋಗದೊಂದಿಗೆ ಅಸ್ತಿತ್ವಕ್ಕೆ ಬಂದ ನಿಡಗುಂದಿಯ 'ಸಹೃದಯ ಸಾಹಿತ್ಯ ಸಂಗಮ ವೇದಿಕೆ' ಯ ಗೌರವಾಧ್ಯಕ್ಷರಾಗಿ ಕಾ.ಹು. ಅವರು ಆಯ್ಕೆಯಾದದ್ದು ಅವರ ಸಾಹಿತ್ಯ ಆಸಕ್ತಿ, ಕ್ರಿಯಾಶೀಲತೆಗೆ ಸಂದ ಗೌರವವಾಗಿದೆ. ನಿಡಗುಂದಿಯ ಶಾಲಾ-ಕಾಲೇಜು, ಓಣಿಗಳಲ್ಲಿ ಮತ್ತು ಆಲಮಟ್ಟಿ ಜವಾಹರ ನವೋದಯ ವಿದ್ಯಾಲಯದಲ್ಲಿ ಅನೇಕ ಸಾಹಿತ್ಯಕ-ಮನರಂಜನೆಯ ಕಾರ್ಯಕ್ರಮಗಳನ್ನು 'ಸಹೃದಯ ಸಾಹಿತ್ಯ ಸಂಗಮ ವೇದಿಕೆ'ಯ

ಮೂಲಕ ಸಂಘಟಿಸಿದರು.

**ಅನುಭವ ಮಂಟಪದ ಅಧ್ಯಕ್ಷ :**

ಮಹಾ ಮಾನವತಾದಿ ಭಕ್ತಿ ಭಂಡಾರಿ ಬಸವಣ್ಣನವರು ಬಸವ ಕಲ್ಯಾಣದಲ್ಲಿ ಆರಂಭಿಸಿದ್ದ ಹನ್ನೆರಡನೆಯ ಶತಮಾನದ ಅನುಭವ ಮಂಟಪದ ಪ್ರೇರಣೆಯಿಂದ, ಕಾ.ಹು. ಅವರು ಗೊಳಸಂಗಿ ಗ್ರಾಮದಲ್ಲಿ ಅನುಭವ ಮಂಟಪವನ್ನು ಸ್ಥಾಪಿಸಿದರು.

ಶರಣ ಬಸವಣ್ಣನವರ ಕಾಯಕ, ದಾಸೋಹ, ವಚನ ಚಿಂತನ ಗೋಷ್ಠಿಗಳನ್ನು ಏರ್ಪಡಿಸಿ, ಆತ್ಮಕಲ್ಯಾಣದ ಜೊತೆಗೆ ಲೋಕ ಕಲ್ಯಾಣದತ್ತ ಜನಪಥ ಸಾಗುವಂತೆ ಮಾಡುವುದೇ ಈ ಅನುಭವ ಮಂಟಪದ ಘನ ಉದ್ದೇಶವಾಗಿತ್ತು. ಶರಣ ದೇವರ ದಾಸಿಮಯ್ಯನವರ ಬದುಕು-ಬರಹ, ಅಕ್ಕಮಹಾದೇವಿ, ಚೆನ್ನಬಸವಣ್ಣನವರ ಕುರಿತಾದ ವಿಚಾರ ಸಂಕಿರಣಗಳನ್ನು ಏರ್ಪಡಿಸಿದರು. ಅಲ್ಲಮಪ್ರಭುವಿನ ಟೀಕಿನ ವಚನಗಳ ಚಿಂತನ ಗೋಷ್ಠಿಯನ್ನು ಆಯೋಜಿಸಲಾಗಿತ್ತು. ಈ ವಿಚಾರ ಸಂಕಿರಣಗಳಿಂದ ಜನತೆಗೆ ದೇವರು-ಧರ್ಮದ ವೈಚಾರಿಕತೆ ಹಾಗೂ ಆಧ್ಯಾತ್ಮ ದರ್ಶನವನ್ನು ಮಾಡಿಸಲಾಯಿತು.

**ಸಾಹಿತ್ಯ-ಸಾಂಸ್ಕೃತಿಕ ಸಮಾರಂಭಗಳ ಕೇಂದ್ರ ಬಿಂದು :**

ಕಳೆದ ನಾಲ್ಕು ದಶಕಗಳಿಂದಲೂ ಇಂದಿನವರೆಗೂ ಸಾಹಿತ್ಯ-ಸಾಂಸ್ಕೃತಿಕ ಸಮಾರಂಭಗಳ ಸಂಘಟಕರಾಗಿ ಕಾ.ಹು. ಅವರು ಸುಮಾರು ೪೦೦ ಕ್ಕೂ ಹೆಚ್ಚು ವಿಶಿಷ್ಟವಾದ ಅರ್ಥಪೂರ್ಣ ಕಾರ್ಯಕ್ರಮಗಳನ್ನು ಮಾಡಿದ್ದಾರೆನ್ನುತ್ತಾರೆ ಅವರ ಆತ್ಮೀಯದಲ್ಲಿ ಒಬ್ಬರಾದ ಶ್ರೀ ಋ.ಶಿ. ಚಿಲಕಾಂತಮಠ ಅವರು. ಗ್ರಾಮೀಣ ಪ್ರದೇಶದಲ್ಲಿ ಸಾಹಿತ್ಯ-ಸಾಂಸ್ಕೃತಿಕ ವಾತಾವರಣವನ್ನು ನಿರಂತರಾಗಿ ಜೀವಂತ ಇಡುವುದೆಂದರೆ ಸಣ್ಣ ಮಾತೇನಲ್ಲ, ಗೊಳಸಂಗಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಾರ್ಷಿಕಾವರ್ತನದಲ್ಲಿ ಯಾವುದೇ ಸಭೆ-ಸಮಾರಂಭಗಳು ನಡೆಯಲಿ ಅಲ್ಲಿ ಕಾ.ಹು. ಅವರು ಇದ್ದೇ ಇರುತ್ತಿದ್ದರು. ಯಾವುದೇ ಕೆಲಸ ಇರಲಿ ಆಗದೆಂಬ ಮಾತೇ ಇವರಲ್ಲಿ ಇರುತ್ತಿರಲಿಲ್ಲ. ಅದು ಸ್ವಾಗತ, ಉಪನ್ಯಾಸ , ವಂದನಾರ್ಪಣೆ, ನಿರೂಪಣೆ ಯಾವುದೇ ಇದ್ದರೂ ಬಹಳ ಅಚ್ಚುಕಟ್ಟತನದಿಂದ ಕೆಲಸ ಮಾಡುವ ಜಾಯಮಾನ ಕಾ.ಹು. ಅವರದೆನ್ನಬೇಕು. ಇವರ ಕಾರ್ಯತತ್ಪರತೆ, ಕ್ರಿಯಾಶೀಲ ಮನಸ್ಸು ಎಂತಹದೆಂದರೆ ಅಡಿಗರು ಹೇಳುವಂತೆ, "ಕಟ್ಟಬಲ್ಲೆವು ನಾವು, ಕೆಡಹಲೊಲ್ಲೆವು ನಾವು" ಎಂಬ ಗುಣ ಸ್ವಭಾವದವರು. ಸಮೂಹದ ಹಿತಚಿಂತಕರ ಸಭೆ-ಸಮಾರಂಭಗಳನ್ನು ಮಾಡುವುದು ಹೇಗೆಂಬುದನ್ನು ಇವರಿಂದ ಕಲಿಯಬೇಕು. ಕಾರ್ಯಕ್ರಮದ ಆಯ್ಕೆ, ಅತಿಥಿಗಳ ಆಯ್ಕೆ, ಆಮಂತ್ರಣ, ಕಾರ್ಯಕ್ರಮ ರೂಪ-

ಸ್ವರೂಪ, ಸಮಯ ಪ್ರಜ್ಞೆ, ವೇದಿಕೆಯ ಶಿಸ್ತು ಎಲ್ಲವೂ ಹೇಳಿ ಮಾಡಿಸಿದಂತೆ ಇರುತ್ತದೆ. ಗೊಳಸಂಗಿ ಗ್ರಾಮದಲ್ಲಿ ವರ್ಷದುದ್ದಕ್ಕೂ ಊರ ನಾಗರಿಕರ ಹಾಗೂ ಶಿಕ್ಷಕರ ಸಹಕಾರದೊಂದಿಗೆ ಸಾಂಸ್ಕೃತಿಕ, ಸಾಹಿತ್ಯಕ ಕಾರ್ಯಕ್ರಮಗಳನ್ನು ಏರ್ಪಡಿಸಿ ಜನರಲ್ಲಿ ಸಾಹಿತ್ಯ -ಸಾಂಸ್ಕೃತಿಕ ಪ್ರಜ್ಞೆ ಒಡಮೂಡುವಂತೆ ಮಾಡುತ್ತಾ ಬಂದ ಹೆಗ್ಗಳಿಕೆ ಇವರದು.

■

## ದಲಿತ ಬಂಧು

ತಾವು ಮುಸ್ಲಿಂ ಸಮುದಾಯದವರಾದರೂ ಗ್ರಾಮದ ಎಲ್ಲ ಜನ ಸಮುದಾಯದೊಂದಿಗೆ ತುಂಬಾ ಅನ್ಯೋನ್ಯತೆಯಿಂದ ಇದ್ದವರು. ಅದರಲ್ಲೂ ಊರ ಆಯಗಾರರಲ್ಲಿ ಒಬ್ಬರಾದ ದಲಿತ ಬಂಧುಗಳೊಂದಿಗೆ ಅತ್ಯಂತ ಒಡನಾಡಿಗಳಾಗಿ ನಡೆದುಕೊಂಡವರು. ಇಡೀ ದಲಿತ ಸಮುದಾಯಕ್ಕೆ ಆತ್ಮೀಯತೆ ಪ್ರೀತಿಯನ್ನು ತೋರಿ ಹತ್ತಿರವಾದವರು; ದಲಿತೋದ್ಧಾರದ ಕಳಕಳಿಯುಳ್ಳವರು.

ಕಾ.ಹು. ಅವರು ಪಂಚಾಯತಿಯ ಸದಸ್ಯರಾಗಿದ್ದಾಗ ದಲಿತ ಕೇರಿಗಳಿಗೆ ಬೇಕಾದ ಸೌಲಭ್ಯಗಳನ್ನು ಕಲ್ಪಿಸುವುದರಲ್ಲಿ ಮಹತ್ವದ ಪಾತ್ರ ವಹಿಸಿದರು. ದೇವಾಲಯಗಳ ಜೀರ್ಣೋದ್ಧಾರ, ಆಶ್ರಯ ಯೋಜನೆಯ ಅಡಿಯಲ್ಲಿ ಮನೆಗಳಿಗೆ ವಿದ್ಯುತ್ ದೀಪದ ವ್ಯವಸ್ಥೆ ಕಲ್ಪಿಸಿದರು. ಗ್ರಾಮ ಸುಧಾರಣೆಯಾಗುತ್ತಿದ್ದಂತೆಯೇ ಎರಡೂ ಕೇರಿಗಳಲ್ಲಿ ನಜೀರಸಾಬರ ಆಡಳಿತದಲ್ಲಿ ಬೋರ ಹಾಕಿಸಿ ಹೀಗೆ ಹಲವಾರು ಅಭಿವೃದ್ಧಿಯ ಕೆಲಸಗಳನ್ನು ಮಾಡಿಕೊಟ್ಟದ್ದನ್ನು ಕೇರಿಯ ಜನ ಮರತಿಲ್ಲ

ಕಾಶೀಮಸಾಬ ಬಿಜಾಪೂರ ಅವರು ನಿಜವಾಗಿಯೂ ಜ್ಯಾತ್ಯಾತೀತ ಮನೋಭಾವದವರು. ಮತ್ತು ತಳ ವರ್ಗಗಳ ಬಗೆಗೆ ಅವರಿಗಿರುವ ಕಾಳಜಿ ಅಪಾರವಾದುದು. ತಮ್ಮ ಗ್ರಾಮದ ಹಿಂದುಳಿದ ವರ್ಗದವರ ಬಗೆಗೆ ವಿಚಾರಿಸುತ್ತ ಶೈಕ್ಷಣಿಕವಾಗಿಯೂ ಕೇರಿಯ ಪ್ರತಿಭೆಗಳು ಬೆಳೆಯಬೇಕೆಂಬ ಆಶಯದವರು. ಈ ಮಾತಿಗೆ ಮೊದಲ ಸಾಕ್ಷಿ ಎಂದರೆ ನಾನೇ ಎನ್ನಬೇಕು. ೧೯೯೫ ರಲ್ಲಿ ನನಗೆ ಪಿಎಚ್.ಡಿ ಪದವಿ ದೊರೆತ ವಿಷಯವನ್ನು ಪತ್ರಿಕೆಯಲ್ಲಿ ಓದಿ ಪತ್ರ ಬರೆದು ಊರ ವತಿಯಿಂದ ಮಾಡಿದ ಸನ್ಮಾನ ಇಂದಿಗೂ ಮರೆಯುವ ಹಾಗಿಲ್ಲ, ಅನಂತರ ನನ್ನಿಂದ "ಗೊಳಸಂಗಿ ಗ್ರಾಮ : ಒಂದು ಸಾಂಸ್ಕೃತಿಕ ಅಧ್ಯಯನ" ಪುಸ್ತಕ ಬರೆಯಲು ಮಾಹಿತಿ ನೀಡಿ, ಸಾಂಸ್ಕೃತಿಕ ಶೋಧನೆಗೆ ಸಹಾಯ ಮಾಡಿ ಬಿಜಾಪೂರ ಶ್ರೀ ಸಿದ್ದೇಶ್ವರ ಬ್ಯಾಂಕಿನಿಂದ ಧನ ಸಹಾಯ ಕೊಡಿಸಿ ಪುಸ್ತಕ ಪ್ರಕಟಣೆಗೆ ನೆರವಾದರು. ಆ ಗ್ರಂಥವನ್ನು ನಾಡಿನ ಖ್ಯಾತ ಸಂಶೋಧಕ ಡಾ. ಎಂ.ಎಂ. ಕಲಬುರ್ಗಿ ಅವರಿಂದ ಬಿಡುಗಡೆ ಮಾಡಿಸಿದರು. ಅದ್ಭುತವಾದ ಕಾರ್ಯಕ್ರಮ ಏರ್ಪಡಿಸಿ ಸಮಾರಂಭವನ್ನು ಮಾಡಿಸಿದರು.

ಚಂದ್ರವಂಶಿ ಮನೆತನದ ಶ್ರೀ ರಾಮಚಂದ್ರ ಚಂದ್ರವಂಶಿ ಅವರ ಮಗ ಡಾ. ಪರುಶರಾಮ ಚಂದ್ರವಂಶಿ ಜರ್ಮನಿ ದೇಶದಲ್ಲಿ ರೈತ ವಿಜ್ಞಾನಿಗಳ ಸಮ್ಮೇಳನದಲ್ಲಿ ಭಾಗವಹಿಸಿ ಬಂದ ನಂತರ ಕಾ.ಹು. ಅವರು ಸನ್ಮಾನ ಕಾರ್ಯಕ್ರಮವನ್ನು ಊರ ವತಿಯಿಂದ ಏರ್ಪಡಿಸಿದರು. ತಮ್ಮ ಸ್ವಂತ ಖರ್ಚಿನಿಂದ ಅಪರೂಪದ ಸನ್ಮಾನ ಸಮಾರಂಭವನ್ನು ಮಾಡಿದರು. ಹಾಗೆಯೇ ಡಾ. ಕಾಳಿಂಗ ಗೊಳಸಂಗಿ ಅವರಿಗೆ ತಮ್ಮ ಮನೆಯ ಗ್ರಂಥಾಲಯದಿಂದ ಜಾನಪದಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಕೊಟ್ಟು 'ವಿಜಾಪೂರ ಜಿಲ್ಲೆಯ ಜಾನಪದ ಕಲಾ ಮೇಳಗಳು' ವಿಷಯವಾಗಿ ಪಿಎಚ್‌ಡಿ ಮಾಡಲು ಸಹಾಯ ಸಹಕಾರ ನೀಡಿದ್ದು, ಕಾ.ಹು. ಅವರು ದಲಿತಪರ ಚಿಂತಕರೆಂದು ತಿಳಿದು ಬರುತ್ತದೆ.

ದಲಿತರಿಗೆ ಬಡವರಿಗೆ ದಾನ ಮಾಡವುದರಲ್ಲಿಯೂ ಕಾಸೀಮಸಾಬರು ಹಿಂದೆ ಬಿದ್ದವರಲ್ಲ, ಒಂದು ಸಲ ಗಿಡಗಂಪ ಜೋಳದ ರಾಶಿ ಮಾಡುವಾಗ ೪೦ ಚೀಲ ತುಂಬಿ ನಿಟ್ಟು ಕಟ್ಟಿದ್ದರು. ಬಂದ ದಲಿತರಿಗೆ ಆಯಗಾರರಿಗೆ ೨ ಚೀಲ ದಾನ ಮಾಡಿದರು. ಈ ವಿಷಯ ತಿಳಿದು, ವೇಷಗಾರ ಮೊದಲಾದ ಅಲೆಮಾರಿ ಜನರು ತಂಡೋಪ ತಂಡವಾಗಿ ಕಣಕ್ಕೆ ಬಂದಾಗ ತಂದೆಯವರ ಆಶಯದಂತೆ ಇನ್ನೊಂದು ಚೀಲ ನಿಟ್ಟಿನಿಂದ ಇಳಿಸಿ ದಾನ ಮಾಡಿದರು. ಹೀಗೆ ದಾನದೊಂದಿಗೆ ಸಹಾಯ ಮಾಡಿದ ನಿದರ್ಶನಗಳು ಅನೇಕ ಕಂಡು ಬರುತ್ತವೆ.

**ನಿದರ್ಶನ ಒಂದು :**

ಕಾಶೀಮಸಾಬರ ತಂದೆಯವರಿಗೆ ಒಮ್ಮೆ ವಿಪರೀತ ಹೊಟ್ಟೆ ನೋವು ಬಂದಿತು. ನೋವು –ಸಂಕಟ ತಾಳಲಾರದೇ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಳ್ಳಲು ಆಲೋಚಿಸಿದ್ದರಂತೆ ಆವಾಗ ಪಕ್ಕದ ಮನೆಯ ರೈತ ಸೈದುಸಾಬ ಬುದ್ನಿ ಅವರು, ಗಾವಠಿ ವೈದನಾದ ಶ್ರೀ ಮಲ್ಲಪ್ಪ ಮಾದರ ಅವರನ್ನು ಕರೆತಂದರು. ಅವನು ಕೊಟ್ಟ ಔಷಧಿಯಿಂದ ಕಾ.ಹು. ಅವರ ತಂದೆ ಗುಣಮುಖರಾದರು. ಈ ಒಂದು ಕೆಲಸ ಮಾಡಿದ ಶ್ರೀ ಮಾದರ ಮಲ್ಲಪ್ಪ ಅವರಿಗೆ, ಕಾಸೀಮಸಾಬರು ಉಡಲು ಬಟ್ಟೆ ಹಾಗೂ ಧನ ಸಹಾಯದೊಂದಿಗೆ ಆತ ಕೊನೆಯುಸಿರು ಇರುವವರೆಗೂ ಸಹಾಯ ಮಾಡಿ ಋಣವನ್ನು ತೀರಿಸಿದರು.

**ನಿದರ್ಶನ ಎರಡು :**

ಗೊಳಸಂಗಿ ಗ್ರಾಮದಲ್ಲಿರುವ ಡೋರರಲ್ಲಿ ಶಂಕರ ಎಂಬುವವನೂ ಒಬ್ಬ. ಡೋರರ ಆಯಗಾರಿಕೆಯ ಕೆಲಸವೆಂದರೆ, ಹೊಲೆಯರು–ಮಾದಿಗರು ಹಾಗೂ ಕಟಗರು ತಂದು ಕೊಟ್ಟ ತೊಗಲನ್ನು ಹದ ಮಾಡಿ ಊರಿನ ರೈತರಿಗೆ ಬೇಕಾಗುವ

ಮಟ್ಟಿ (ಕಪಲಿ), ಬಾರಕೋಲ, ಜತಿಗಿ,ಮಿಣಿ ಮೊದಲಾದ ಸಾಮಾನುಗಳನ್ನು ಮಾಡಿಕೊಡುವುದು. ಆಯಗಾರಿಕೆಯಲ್ಲಿ ಡೋರ ಶಂಕರಿಗೆ ಕಾಸೀಮಸಾಬರದು ಒಂದು ಮನೆತನವಾಗಿತ್ತು. ಕಾಸೀಮ ಸಾಬರ ತಂದೆಯವರು ಶಂಕರಿಗೆ ತೊಗಲು ಕೊಳ್ಳಲು ಇತರೆ ಕೆಲಸಕ್ಕೆ ಆಗಾಗ ಹಣ ಕೊಡುತ್ತಿದ್ದರು. ಕಾಲಕ್ರಮೇಣ ಶಂಕರಿಗೆ ಮುಪ್ಪಾವಸ್ಥೆಯಲ್ಲಿ ಮಕ್ಕಳು ಸರಿಯಾಗಿ ನೋಡದೇ ಇರುವುದರಿಂದ ಕಾಸೀಮಸಾಬರು ತಮ್ಮ ಮನೆಯಲ್ಲಿ ಉಟೋಪಚಾರ ಮಾಡಿ ಮಾನವೀಯತೆ ತೋರಿದರು.

**ನಿದರ್ಶನ ಮೂರು :**

ಗ್ರಾಮೀಣ ಪ್ರದೇಶದಲ್ಲಿ ಗಾದೆ ಮಾತೊಂದು ಹೀಗಿದೆ. 'ಆಳು ಮಗ ಬೇರೆ ಅಲ್ಲ, ಮನೆಯ ಮಗ ಬೇರೆ ಅಲ್ಲ' ಎಂಬುದು, ಕಾ.ಹು. ಬಿಜಾಪೂರ ಅವರು ಅದನ್ನು ಅಕ್ಷರ ಸಹ ಅನುಸರಿಸಿದ್ದರು. ಆಳು ಮಗ ಮಾದರ ಚಂದ್ರಾಮ ಕಾಸೀಮ ಸಾಬರ ತೋಟದಲ್ಲಿ ೧೦ ವರ್ಷಗಳವರೆಗೆ ನಿಯತ್ತಿನಿಂದ ದುಡಿದು ಎಲ್ಲರ ಪ್ರೀತಿಗೆ ಪಾತ್ರವಾಗಿದ್ದನು. ಆಕಸ್ಮಿಕವಾಗಿ ಅವನ ಹೆಂಡತಿ ತೀರಿ ಹೋದಳು. ಮಗಳು, ಗಂಡನ ಮನೆಗೆ ಹೋದರೆ, ಮಗ ತನ್ನ ಹೆಂಡತಿಯೊಂದಿಗೆ ಗೋವಾಕ್ಕೆ ದುಡಿಯಲು ಹೋದನು. ಆವಾಗ ವಯಸ್ಸಾದ ಹಿರಿಯ ಜೀವಿ ಚಂದ್ರಾಮನನ್ನು ಮಕ್ಕಳಗಿಂತಲೂ ಚೆನ್ನಾಗಿ ನೋಡಿಕೊಂಡರು. ಈ ರೀತಿಯಾಗಿ ಗ್ರಾಮದ ಬಡವರನ್ನು ದಲಿತರನ್ನು ಪ್ರೀತಿಯಿಂದ ಕರುಣೆಯಿಂದ ಕಂಡವರು ಕಾಸೀಮಸಾಬರು ಎಂದು ಅನೇಕರು ಹೇಳುತ್ತಾರೆ.

ದಲಿತರಲ್ಲಿರುವ ಪ್ರತಿಭಾವಂತರನ್ನು ಗುರುತಿಸಿ ಗೌರವಿಸುವುದನ್ನು ಕೂಡಾ ಮಾಡುತ್ತಿದ್ದರು. ಹಾಡುಗಾರರನ್ನು ಕುಸ್ತಿಪಟುಗಳನ್ನು, ಕಲಾವಿದರನ್ನು, ಶೈಕ್ಷಣಿಕ ಸಾಧನೆ ಮಾಡಿದವರನ್ನು ಕರೆದು ಸನ್ಮಾನಿಸಿ, ಗೌರವ-ಪ್ರೀತಿ ಹೆಚ್ಚಿಸುವ ಹೃದಯವಂತರು ಕಾ.ಹು. ಹೀಗಾಗಿ ದಲಿತರಿಗೆ ಕಾ.ಹು. ಅವರೆಂದರೆ ಅಪಾರ ಪ್ರೀತಿ ಅಭಿಮಾನ.

**ಹವ್ಯಾಸಿ ಪತ್ರಿಕಾ ವರದಿಗಾರ :**

ಕನ್ನಡ ದಿನಪತ್ರಿಕೆಗಳನ್ನು ಓದುವುದು ಕಾ.ಹು. ಅವರಿಗೆ ಬಾಲ್ಯದಿಂದಲೇ ಬೆಳೆದು ಬಂದ ಕರ್ತವ್ಯಪ್ರಜ್ಞೆ. ಬಿಜಾಪೂರದ ಜಿಲ್ಲಾ ಕೇಂದ್ರ ಗ್ರಂಥಾಲಯಕ್ಕೆ ತಪ್ಪದೇ ಹೋಗಿ ದಿನ ಪತ್ರಿಕೆ -ಪುಸ್ತಕ ಓದಿ ಬರುತ್ತಿದ್ದರು. ವಿದ್ಯಾಗುರುಗಳಾದ ಆರ್.ಜಿ. ಕುಲಕರ್ಣಿಯವರ ಮಾರ್ಗದರ್ಶನದಲ್ಲಿ ಸಣ್ಣ ಕತೆ, ನಗೆ ಹನಿ, ಚುಟುಕುಗಳನ್ನು ಬರೆದು ಪತ್ರಿಕೆಗಳಿಗೆ ಕಳಿಸತೊಡಗಿದರು. ಅವು ಆಗಾಗ ಪ್ರಕಟವಾಗುತ್ತಿದ್ದವು.

ಅನಿವಾರ್ಯ ಕಾರಣಗಳಿಂದ ಶಿಕ್ಷಣ ಅರ್ಧಕ್ಕೆ ನಿಂತು ಮರಳಿ ಗೊಳಸಂಗಿ ಗ್ರಾಮಕ್ಕೆ ಬಂದಾಗ, ಈ ಊರಿಗೆ ದಿನ ಪತ್ರಿಕಗಳಲ್ಲಿ ಸಂಯುಕ್ತ ಕರ್ನಾಟಕ ಒಂದೇ ಬರುತ್ತಿತ್ತು. ಇದರಿಂದ ಕಾ.ಹು. ಅವರ ಓದಿನ ದಾಹ ಹಿಂಗಲಿಲ್ಲ, ಆಗ ಬೆಂಗಳೂರು, ಹುಬ್ಬಳ್ಳಿ, ವಿಜಾಪೂರಗಳಿಂದ ಹೊರಡುತ್ತಿದ್ದ ಹತ್ತಾರು ಪತ್ರಿಕೆಗಳಿಗೆ ಚಂದಾದಾರರಾಗಿ ಜ್ಞಾನಾರ್ಜನೆಗೆ ದಾರಿ ಮಾಡಿಕೊಂಡದ್ದು ಅದೊಂದು ಇತಿಹಾಸ.

ಐವತ್ತರ ದಶಕದಲ್ಲಿ ಗೊಳಸಂಗಿ ಸುತ್ತಲಿನ ಗ್ರಾಮಗಳಲ್ಲಿಯ ಸುದ್ದಿಗಳನ್ನು ಬರೆದು ಕಳಿಸುವವರು ಯಾರೂ ಇರಲಿಲ್ಲ. ಆ ಕಾರ್ಯವನ್ನು ಕಾ.ಹು. ಅವರು ಶ್ರದ್ಧೆ ಪ್ರಾಮಾಣಿಕತೆಯಿಂದ ಮಾಡಹತ್ತಿದ್ದರು. ಯಾವ ವಾಹನ ಸೌಲಭ್ಯಗಳು ಇಲ್ಲದ ಅಂದಿನ ದಿನಮಾನಗಳಲ್ಲಿ ಗೊಳಸಂಗಿಯಿಂದ ನಾಲ್ಕೈದು ಕಿ.ಮೀ. ಇರುವ ತೆಲಗಿ ರೇಲ್ವೆ ಸ್ಟೇಶನ್ನಿಗೆ ಹೋಗಿ, ಅಲ್ಲಿ ಪತ್ರಿಕಾ ಏಜೆಂಟರಾದ ಡಾ. ಗಾಂಧಿಯವರ ಸಿಕ್ಕ ಹಾಕಿಸಿ ವರದಿಯನ್ನು ಪತ್ರಿಕೆಗೆ ಕಳಿಹಿಸುತ್ತಿದ್ದರು. ಅವರ ಮೊದಲ ವರದಿ ಸಂಯುಕ್ತ ಕರ್ನಾಟಕದ ಮುಖಮುಟದಲ್ಲಿ ಪ್ರಕಟವಾಯಿತು. ಅದೊಂದು ವಿಶಿಷ್ಟ ಸುದ್ದಿ. ಅದೆಂದರೆ, " ಬರೆಯುವ ಎತ್ತುಗಳು" ಎಂಬುದು ಆ ಸುದ್ದಿ. ಕಾ.ಹು. ಅವರ ಸಹೋದರನಾದ ಮಲೀಕಸಾಬ ಬಿಜಾಪೂರ ಇವರು ಹಣೆಗ್ಗ, ಕೊಳಕಣ್ಣಿ, ಬಾರಕೋಲು ಇಲ್ಲದೇ ಮಡಿಕೆಗೆ ಎತ್ತುಗಳನ್ನು ಹೂಡಿ ಕನ್ನಡ ಹಾಗೂ ಇಂಗೀಷ್ ಅಕ್ಷರಗಳನ್ನು ಸುಂದರವಾಗಿ ಮೂಡಿಸಿ ನಾಲ್ಕೈದು ಎಕರೆ ಹೊಲ ಬಿತ್ತಿದ್ದು ದಾಖಲಾರ್ಹ. ಇದೇ ವಿಷಯ ಇವರ ಪ್ರಮುಖ ವರದಿಯ ವಸ್ತುವಾಯಿತು. ನಾಲ್ಕೈದು ದಶಕಗಳಿಂದಲೂ ೨೫ ಕ್ಕೂ ಹೆಚ್ಚು ಪತ್ರಿಕೆಗಳಿಗೆ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ವರದಿ ಕಳಿಸುವ ಹವ್ಯಾಸವನ್ನು ಬೆಳಿಸಿಕೊಂಡಿದ್ದರು. ಪತ್ರಿಕಾ ರಂಗದಲ್ಲಿ ಒಂದು ವಿಶಿಷ್ಟಸ್ಥಾನ ಕಾ.ಹು. ಗಳಿಸಿಕೊಂಡಿದ್ದರು. ವಸ್ತುನಿಷ್ಠ ವರದಿಗಳಿಂದ ಸಾರ್ವಜನಿಕರಲ್ಲಿ, ಸರಕಾರಕ್ಕೆ ಜಾಗೃತಿ ಮೂಡಿಸುವ ಕಾರ್ಯವನ್ನು ಮಾಡಿದರು. ಇದುವರೆಗೆ ಸುಮಾರು ೫೦೦ ಕ್ಕೂ ಹೆಚ್ಚು ಇವರ ವರದಿಗಳು ಪತ್ರಿಕೆಗಳಲ್ಲಿ ಪ್ರಕಟಗೊಂಡಿವೆ. ಇದು ಕಾ.ಹು. ಅವರು ಪತ್ರಿಕಾರಂಗಕ್ಕೆ ಸಲ್ಲಿಸಿದ ವಿಶಿಷ್ಠ ಸೇವೆಯಾಗಿದೆ.

**ಭಾವೈಕ್ಯದ ಬಂಧು :**

'ಮನುಷ್ಯ ಕುಲಂ ತಾನೊಂದೆ ವಲಂ' ಎಂದು ಪಂಪ; 'ಇವನಾರವ ಇವನಾರವ ಇವನಾರವ ಎಂದಿನಿಸದೆ, ಇವ ನಮ್ಮವ ಇವ ನಮ್ಮವ ಎಂದಿನಿಸಯ್ಯ' ಎನ್ನುವ ಬಸವಣ್ಣನ ಮಾತು ಕಾ.ಹು. ಅವರ ಮೇಲೆ ಗಾಢ ಪರಿಣಾಮ ಬೀರಿರಬೇಕು. ಆದ್ದರಿಂದಲೋ ಏನೋ ಎಲ್ಲರ ಹೃದಯವೆಂಬ ಹೊಲದಲ್ಲಿ ಭಾವೈಕ್ಯದ ಬೀಜಗಳನ್ನು ಬಿತ್ತಿ ಬೆಳೆಯುವ ಕೆಲಸದಲ್ಲಿ ತೊಡಗಿರುವ ವಿಶ್ವ ಪ್ರೇಮಿ. ಅವರ

ನಾಡಿ ಮಿಡಿತಗಳಲ್ಲಿ ನಡೆ–ನುಡಿಯಲ್ಲಿ ; ಆಚಾರ–ವಿಚಾರದಲ್ಲಿ ಭಾವೈಕ್ಯದ ಬೆಳಕು ಪ್ರಕಾಶಿಸುತ್ತಿರುವುದು ಗೋಳಸಂಗಿ ಗ್ರಾಮದ ಸೌಭಾಗ್ಯವೆಂದೇ ಭಾವಿಸಬೇಕು. ಧಾರ್ಮಿಕವಾಗಿ ನಾನೊಬ್ಬ ಮಹಮ್ಮದೀಯ; ಆದರೆ ಪ್ರಾದೇಶಿಕವಾಗಿ ನಾನೊಬ್ಬ ಕನ್ನಡಿಗ; ರಾಷ್ಟ್ರೀಯವಾಗಿ ನಾನೊಬ್ಬ ಭಾರತೀಯ ಎಂಬ ರಾಷ್ಟ್ರಪ್ರೇಮ ಅವರದು. ಇಂದು ನಮ್ಮಲ್ಲಿ ಯುವ ಜನಾಂಗಕ್ಕೆ ಬೇಕಾಗಿರುವುದು ಈ ತೆರನಾದ ರಾಷ್ಟ್ರ ಪ್ರೇಮ, ಅಭಿಮಾನ ಎಂಬುದು ಗಮನಾರ್ಹ.

"ತನ್ನಂಗ ನೋಡಿದರ ಭಿನ್ನಿಲ್ಲ ಭೇದಿಲ್ಲ
ತನ್ನಂಗ ತನ್ನ ಮಗಳ್ಹಂಗ / ನೋಡಿದರ
ಕಣ್ಣ ಮುಂದಾದೊ ಕೈಲಾಸ"

ಎಂಬ ಜನಪದ ತ್ರಿಪದಿಯನ್ನು ಭಾಷಣದಲ್ಲಿ ಮಾತ್ರವಲ್ಲ; ಬದುಕಿನಲ್ಲಿಯೂ ಉಳಿಸಿಕೊಂಡು ಬಂದವರು. ಸರ್ವಧರ್ಮ ಸಮಾನತೆಯ ಭಾವ ಇವರಲ್ಲಿ ಸದಾ ತುಂಬಿ ತುಳುಕುತ್ತಿತ್ತು. 'ಕುಲ ಒಂದೇ ತನ್ನ ತಾ ಅರಿದವಂಗೆ' ಎಂಬ ತತ್ವಾರಾಧಕರು. ಈ ಸೂತ್ರದಿಂದಲೇ ಇಡೀ ಗ್ರಾಮದಲ್ಲಿ ಭಾವೈಕ್ಯತೆಯ ಪರಿಸರ ರೂಪಿಸಲು ಪ್ರಯತ್ನಿಸಿದವರು.

ಶಾಂತಿ ಸಾಗರದಂತಿದ್ದ ಗ್ರಾಮ ಕೆಲವು ಸಲ ಶಾಂತಿ ಭಂಗವಾಗುವ ಸಂದರ್ಭ ಬಂದಾಗ ಕಾ.ಹು. ತುಂಬಾ ಜಾಣ್ಮೆಯಿಂದ ಅದನ್ನು ಶಮನ ಗೊಳಿಸುತ್ತಿದ್ದರು. ಹಿಂದೂ–ಮುಸ್ಲಿಂರು ಸಾಮರಸ್ಯದಿಂದ ಬದುಕಲು ಹಲವಾರು ರಚನಾತ್ಮಕ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು. "ಹಿಂದು–ಮುಸ್ಲಿಂ ಭಾಯಿ ಭಾಯಿ" ವಿಚಾರ ಸಂಕಿರಣ ಏರ್ಪಡಿಸಿ ಡಾ. ಬಿ.ಸಿ. ಪರಮಗೊಂಡ, ಶ್ರೀ ಜಿ. ವಾಯ್. ಕೌಜಲಗಿ, ಮುರ್ತುಜ ಮಾಸ್ತರ ಹತ್ತರಕಿಹಾಳ, ಮೋಟಗಿಮಠ ಸ್ವಾಮಿಗಳು, ಬಿ.ಎಸ್. ಮೇಟಿ ಮುಂತಾದವರನ್ನು ಕರೆಯಿಸಿ ಭಾಷಣ ಮಾಡಿಸುತ್ತಿದ್ದರು. ಶಾಂತಿಯ ವಾತಾವರಣ ನಿರ್ಮಿಸುತ್ತಿದ್ದರು. ಇದೇ ಸಂದರ್ಭದಲ್ಲಿ ಗ್ರಾಮದ ದಾನಿಗಳಾದ ಚಂದಪ್ಪ ಕಾರಜೋಳ ಹಾಗೂ ದೋಂಡಿಬಾ ಜಾಧವ ಅವರನ್ನು ಅಂಜುಮನ್ ಎ–ಇಸ್ಲಾಂ ಸಮಾಜದಿಂದ ಶಾಲು ಹೊದಿಸಿ ಸನ್ಮಾಸಿಲಾಯಿತು. ನಾವೆಲ್ಲ ಒಂದೇ ಎಂಬ ಭಾವ ಮೂಡುವಂತೆ ಮಾಡುತ್ತಿದ್ದರು.

ಮಕ್ಕಳಲ್ಲಿ, ಯುವಕರಲ್ಲಿ 'ಭಾವೈಕ್ಯತೆ' ಮೂಡಬೇಕೆಂಬ ದೃಷ್ಟಿಯಿಂದ 'ಭಾವೈಕ್ಯತೆಯ ಕವಿಗೋಷ್ಠಿ' ಯನ್ನು ಏರ್ಪಡಿಸಿ, ಅಂದಿನ ಜಿಲ್ಲಾಧಿಕಾರಿ ಶ್ರೀ ಆಯ್. ಎಂ. ವಿಠ್ಠಲಮೂರ್ತಿಯನ್ನು ಅತಿಥಿಯಾಗಿ ಆಗಮಿಸಿದ್ದ ಅವರು "ಈ ಮಣ್ಣಿನ ಕಣ ಕಣದಲ್ಲಿ, ನೀರ ಹನಿ ಹನಿಯಲ್ಲಿ ಗಾಳಿ ಅಲೆ ಅಲೆಯಲ್ಲಿ ಭಾವೈಕ್ಯತೆ

ತುಂಬಿಕೊಂಡಿದೆ" ಎಂಬುದಕ್ಕೆ ಈ :ಭಾವೈಕ್ಯತೆಯ ಕವಿಗೋಷ್ಠಿಯೇ ಸಾಕ್ಷಿ" ಎಂದು ನುಡಿದರು.

ಯರನಾಳ ಗ್ರಾಮದ ಪೂಜ್ಯ ಶ್ರೀ ದಯಾನಂದ ಮಹಾ ಸ್ವಾಮಿಗಳಿಂದ ನೂತನಾಗಿ ನಿರ್ಮಿಸಲ್ಪಟ್ಟ ಗೊಳಸಂಗಿಯ ಜುಮ್ಮಾ ಮಸೀದೆಯನ್ನು ಉದ್ಘಾಟನೆ ಮಾಡಿಸುವಲ್ಲಿ ಕಾ.ಹು. ಅವರ ಪಾತ್ರ ಪ್ರಮುಖವಾದುದು. ಅದೇ ವೇದಿಕೆಯ ಮೇಲೆ 'ಬಹು ಭಾಷಾ ಕವಿಗೋಷ್ಠಿ' ಯನ್ನು ಏರ್ಪಡಿಸಿದ್ದು ವಿಶೇಷವಾಗಿತ್ತು. ಅಂದಿನ ಸಮಾರಂಭದಲ್ಲಿ ಶ್ರೀ ಪಿ.ವ್ಹಿ. ವಜ್ರಮಟ್ಟಿ, ಶ್ರೀ ಬಿ.ಎಂ. ತಳಗಡೆ, ಪಟ್ಟಣ ಶೆಟ್ಟಿ ಮುಂತಾದವರು 'ಮಾನವ ಧರ್ಮ' ಕುರಿತು ಉಪನ್ಯಾಸ ನೀಡಿದರು.

ಜುಮ್ಮಾ ಮಸೀದೆ ಕಟ್ಟಿಸಿದ ಸಂತರಾದ ಮುಸ್ತಫಾ ಖಾದ್ರಿ ಪೀರಜಾದೆ ಅವರಿಂದ ಗೊಳಸಂಗಿ ಗ್ರಾಮದ ಹಿಂದೂ ಧರ್ಮದ ದೇವಾಲಯಗಳಾದ ಶ್ರೀ ಬಸವೇಶ್ವರ ಹಾಗೂ ದ್ಯಾಮವ್ವನ ಗುಡಿಗಳಿಗೆ ಆಯಿಲ್ ಪೇಂಟ್ ಕೊಡಿಸುವಲ್ಲಿ ಕಾ.ಹು. ಅವರು ಪ್ರೇರಣೆ ನೀಡಿದರು. ಹಾಗೆಯೇ ನಾನು ಬರೆದ 'ಗೊಳಸಂಗಿ ಗ್ರಾಮ : ಒಂದು ಸಾಂಸ್ಕೃತಿಕ ಅಧ್ಯಯನ' ಪುಸ್ತಕ ಬಿಡುಗಡೆಯ ಸಂದರ್ಭದಲ್ಲಿ ದಸ್ತಗೀರಸಾಬ ಉಪ್ಪಲದಿನ್ನಿ ರೈತರಿಂದ ೧೨ ದೇವಾಲಯಗಳಿಗೆ ತಲಾ ೫೦೧ ರಂತೆ ದೇಣಿಗೆ ಕೊಡಿಸುವಲ್ಲಿ ಯಶಸ್ವಿಯಾದರು. ಅಂದಿನ ಸಮಾರಂಭದ ಮುಖ್ಯ ಅತಿಥಿಗಳಾದ ನಾಡಿನ ಖ್ಯಾತ ಸಂಶೋದಕ ಡಾ. ಎಂ. ಎಂ. ಕಲಬುರ್ಗಿಯವರಿಂದ ದಾನಿಗಳನ್ನು ಸನ್ಮಾನಿಸಿದರು. ಅತಿಥಿಗಳಾಗಿ ಹುಲಕೋಟಿಯ ಪ್ರಗತಿಪರ ರೈತರಾದ ಶ್ರೀ ದ.ಭೀ. ಓದುಗೌಡರ, ಸಾಹಿತಿ ಡಾ. ಶ್ರೀರಾಮ ಇಟ್ಟಣ್ಣವರ ಭಾಗವಹಿಸಿದ್ದರು.

ಭಾವೈಕ್ಯತೆ ಕುರಿತು ಕಾರ್ಯಕ್ರಮ ಸಂಯೋಜನೆ ಮಾಡುವುದಲ್ಲದೆ ತಾವೂ ಉಪನ್ಯಾಸ ನೀಡುದ್ದುಂಟು. ಇಲ್ಲಿ ಕೆಲವನ್ನು ಹೆಸರಿಸುವುದಾದರೆ, ೧) ಗೊಳಸಂಗಿ ಗ್ರಾಮ ಭಾವೈಕ್ಯದ ಧಾಮ, ೨) ಮಕ್ಕಳಲ್ಲಿ ರಾಷ್ಟ್ರೀಯ ಪ್ರಜ್ಞೆ ೩) ವಿಜಾಪೂರ ಜಿಲ್ಲೆಯ ಜನಪದ ಕಲೆಗಳಲ್ಲಿ ಹಿಂದೂ-ಮುಸ್ಲಿಂ ಸಾಮರಸ್ಯ ೪) ಭಾಷೆ ಎರಡು ಭಾವ ಒಂದು ೫) ಹಿಂದೂ-ಮುಸ್ಲಿಂರ ಹಬ್ಬ ಮೊಹರಂ ೬) ಶ್ರೀ ಅರವಿಂದ ಆಶ್ರಮದ ಮುಸ್ಲಿಂಸಾಧಕ ನುರುಲ್ಲಾ ಖಾದ್ರಿ ಜಹಗೀರದಾರ ೭) ಸರ್ವಧರ್ಮ ಸಮನ್ವಯ ಸಂಕೇತ ದಸ್ತಗೀರಸಾಬ ಉಪ್ಪಲದಿನ್ನಿ ಮೊದಲಾದವು. ಇದರಲ್ಲಿ ಕೆಲವು ಲೇಖನಗಳು ಅಲ್ಲಲ್ಲಿ ಪತ್ರಿಕೆ ಮತ್ತು ಪುಸ್ತಕಗಳಲ್ಲಿ ಪ್ರಕಟಗೊಂಡಿವೆ.

**ಸುವರ್ಣ ಸ್ವಾತಂತ್ರ್ಯ ಸಂಭ್ರಮದ ಸಂಚಾಲಕ :**

ಕಾ.ಹು. ಅವರು ಬಸವನ ಬಾಗೇವಾಡಿ ತಾಲೂಕಾ ಕ.ಸಾ.ಪ. ಅಧ್ಯಕ್ಷರಾಗಿರುವ ಸಂದರ್ಭದಲ್ಲಿಯೇ ಸುವರ್ಣ ಸ್ವಾತಂತ್ರ್ಯ ಸಂಭ್ರಮ ಬಂದಿತು. ಅದರ ಅಂಗವಾಗಿ

೧೯೯೭ ಅಗಸ್ಟ ೧ ರಿಂದ ೧೫ರವರೆಗೆ ತಾಲೂಕಾ ಕನ್ನಡ ಸಾಹಿತ್ಯ ಪರಿಷತ್ತಿನಿಂದ ಸುವರ್ಣ ಸ್ವಾತಂತ್ರೋತ್ಸವ ಕುರಿತ ಹಲವಾರು ಸಾಹಿತ್ಯಕ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿದ್ದರು. ವಿದ್ಯಾರ್ಥಿಗಳಿಗಾಗಿ ಭಾಷಣ, ದೇಶಭಕ್ತಿ ಸ್ಪರ್ಧೆಗಳು, ಚಿತ್ರಕಲಾ ಪ್ರದರ್ಶನ, ಸ್ವಾತಂತ್ರ್ಯ ಯೋಧರಿಗೆ ಸನ್ಮಾನ ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ಸಾವಿರಕ್ಕೂ ಹೆಚ್ಚು ಮಕ್ಕಳು ವಿವಿಧ ಸ್ಪರ್ಧೆಗಳಲ್ಲಿ ತೊಡಗಿಸಿಕೊಂಡು ಸ್ವಾತಂತ್ರ್ಯದ ಪರಿಕಲ್ಪನೆ ಯನ್ನು ಅರಿತುಕೊಂಡರು.

ಇದೊಂದು ರೀತಿ ಸಂಚಾರಿ ಸರಣಿ ಸುವರ್ಣ ಸ್ವಾತಂತ್ರೋತ್ಸವ ಆಚರಣೆಯಾಗಿ ಪರಿಣಮಿಸಿತು. ಬಸವನ ಬಾಗೇವಾಡಿ, ಕೊಲ್ಹಾರ, ಹೂವಿನ ಹಿಪ್ಪರಗಿ, ಮುತ್ತಗಿ, ನಿಡಗುಂದಿ, ಆಲಮಟ್ಟಿ, ಮಸಿಬನಾಳ, ಗೊಳಸಂಗಿ, ಕೂಡಗಿ, ಬೀರಲದಿನ್ನಿ, ಮನಗೂಳಿ ಹಾಗೂ ಇಟಗಿಯ ಶಾಲಾ–ಕಾಲೇಜುಗಳಲ್ಲಿ 'ಸ್ವಾತಂತ್ರ್ಯ ಹೋರಾಟದಲ್ಲಿ ಮುಸ್ಲಿಂರ ಪಾತ್ರ'– 'ಸ್ವಾತಂತ್ರ್ಯಕ್ಕಾಗಿ ಹೋರಾಡಿದ ರಾಷ್ಟ್ರ ನಾಯಕರು;' 'ಸ್ವಾತಂತ್ರ್ಯ ರಕ್ಷಣೆಯಲ್ಲಿ ಯುವಕರ ಪಾತ್ರ' ಮೊದಲಾದ ವಿಷಯಗಳ ಬಗೆಗೆ ಉಪನ್ಯಾಸವನ್ನೂ ಕೂಡಾ ಏರ್ಪಡಿಸಲಾಗಿತ್ತು. ಬಿಜಾಪೂರ ಜಿಲ್ಲೆಯ ಸಾಹಿತಿಗಳ ದಂಡು ಈ ಸಂಚಾರಿ ಸರಣಿ ಉಪನ್ಯಾಸ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಅಪಾರ ಹಣ ಖರ್ಚು ಮಾಡಿ ಶ್ರಮವಹಿಸಿ ಕಾ.ಹು. ಅವರು ಇಂತಹ ಕಾರ್ಯಕ್ರಮ ಸಂಘಟಿಸಿದ್ದರು.

**ಪರೋಪಕಾರದ ಸಾಹಸ ಗಾಥೆ :**

ಕಾ.ಹು. ಅವರದು ಪರೋಪಕಾರ ಜೀವನ, ಗಂಧದಂಥ ಬದುಕು ಅವರದು. ಸದಾ ಪರರ ಬಗೆಗೆ ಚಿಂತಿಸುವ ವ್ಯಕ್ತಿ. ಕಷ್ಟದಲ್ಲಿರುವವರಿಗೆ ಏನಾದರೂ ತಮ್ಮ ಕೈಲಾದಷ್ಟು ಸಹಾಯ ಮಾಡಬೇಕೆಂಬ ಮನೋಭಾವದವರು. ತಮ್ಮ ಜೀವನದಲ್ಲಿ ಮಾಡಿದ ಕೆಲವು ಸಾಹಸದ ಕೆಲಸಗಳು ಹೀಗಿವೆ.

**೧. ಅಜ್ಜಿಯನ್ನು ಬದುಕಿಸಿದ್ದು :**

ಅದು ಚಳಿಗಾಲದ ಸಮಯ ಅಲ್ಲದೆ ವಿಪರೀತ ಥಂಡಿ. ಬಡತನದ ಸಂಸಾರ. ಮಗ ವ್ಯಾಪಾರಕ್ಕಾಗಿ ಪರ ಊರಿಗೆ ಹೋಗಿದ್ದರೆ ಸೊಸೆ ಕೂಲಿ ಕೆಲಸಕ್ಕೆ ಹೋಗಿದ್ದಳು. ಅಜ್ಜಿ ಆಶಾಬಿ ಮನೆಯಲ್ಲಿ ಒಬ್ಬಳೇ ಇದ್ದಳು. ಅತಿಯಾದ ಚಳಿ ಇರುವುದರಿಂದ ಹತ್ತಿರದಲ್ಲಿರುವ ಸಿಂದಿ ಪರಕಿಯನ್ನು ತಂದು ಅದರ ಮೇಲೆ ನಾಲ್ಕೈದು ಕುಳ್ಳು ಹಾಕಿ ಬೆಂಕಿ ಮಾಡಿ ಉರಿ ಹಚ್ಚಿದಳು. ಉರಿಗೆ ಕೈಕಾಲು ಒಡ್ಡಿದಾಗ ಥಂಡಿ ಬಿಟ್ಟಿತು. ಅಷ್ಟರಲ್ಲಿ ಬೆಂಕಿಯ ಕಿಡಿಯೊಂದು ಗಾಳಿಗೆ ಹಾರಿ ಹತ್ತಿರದಲ್ಲಿರುವ ಸೇಂಗಾದ ಹೊಟ್ಟಿಗೆ ಹೋಗಿ ತಾಕಿತು. ಒಂದು ಕ್ಷಣದಲ್ಲಿಯೇ ಭಗ್ ಎಂದು ಉರಿಹತ್ತಿ ಎಲ್ಲೆಡೆ ಚಾಚಿತು. ಮನೆಗೂ ಹಬ್ಬಿತು.

ಮನೆಗೆ ಉರಿ ಹತ್ತಲು ಅಜ್ಜಿ ಗಾಬರಿಯಾಗಿ ಅಳತೊಡಗಿದಳು. ಅದೇ ಹೊತ್ತಿಗೆ ಎತ್ತಿನ ಗಾಡಿಯಲ್ಲಿ ರಾಶಿ ಹೇರಿಕೊಂಡು ಬರುತ್ತಿದ್ದ ರೈತ ಕಾಸೀಮ ಸಾಬರು, ಆ ಅಜ್ಜಿ ಅಳುವ ದನಿ ಕೇಳಿದೊಡನೆ ಗಾಡಿ ಕೊಳ್ಳ ಹರಿದು, ಉರಿಯ ನಡುವೆ ಸಿಲುಕಿದ್ದ ಆಶಾಬಿ ಅಜ್ಜಿಯನ್ನು ನೋಡಿದವರೆ, ಜೀವ ಭಯವಿಲ್ಲದೆ ಉರಿಯೊಳಗೆ ಹಾರಿ ಮುದುಕಿಯನ್ನು ಅನಾಮತ್ತಾಗಿ ಎತ್ತಿಕೊಂಡು ಹೊರಗೆ ಬಂದರು. ಅಷ್ಟರಲ್ಲಿ ನೂರಾರು ಜನ ಕೂಡಿದರು. ಜನರೆಲ್ಲ ಕಾಹು ಅವರನ್ನು ಗುಣಗಾನ ಮಾಡಿದರು. ಅಜ್ಜಿ ಬದುಕಿದಳು. ಮನೆ ಪೂರ್ಣ ಸುಟ್ಟು ಹೋಯಿತು.

### ೨. ಬಾವಿಗೆ ಬಿದ್ದ ಮಗು :

ದಿನದಂತೆ ಕಾ.ಹು. ಅವರು ಎಮ್ಮೆ, ಆಕಳು, ಆಡುಗಳನ್ನು ಹೊಡೆದು ಕೊಂಡು ಹೊಲಕ್ಕೆ ಹೊರಟ್ಟಿದ್ದರು. ಗಂಜಾಳ ತೋಟದ ಹಾದಿಯ ಮಗ್ಗುಲಿಗೆ ಇರುವ ರಾಮಣ್ಣ ಕಿರಗತ ಅವರ ಬಾವಿಯಲ್ಲಿ ಅವರ ಸಹೋದರನ ಐದು ವರ್ಷದ ಮಗ ಮಾರುತಿ. ಈ ಮಾರುತಿ ತಂಬಿಗೆಗೆ ಬಾಳೆ ಸೊಟ್ಟಿಯ ಹಗ್ಗ ಮಾಡಿ, ಮಟ್ಟಿ ಬಾಯ ಬಚ್ಚಲಿನ ಒಳಗೆ ನಿಂತು ನೀರು ಸೇದುವ ಆಟ ಆಡುವಾಗ ಜೋಲಿ ಹೋಗಿ ಬಾವಿಯಲ್ಲಿ ಬೀಳುವುದಕ್ಕೂ ಕಾಸೀಮಸಾಬರು ನೋಡುವುದಕ್ಕೂ ಸರಿ ಹೋಯಿತು. ಬಾವಿಯ ಸುತ್ತ ನಿಂತು ನೋಡುವವರೆ ಹೆಚ್ಚಿದ್ದರೇ ವಿನ: ಹುಡುಗನ ಜೀವ ಉಳಿಸಲು ಯಾರೂ ಸಿದ್ಧರಿರಲಿಲ್ಲ. ಆಗ ಕಾ.ಹು. ಅವರು ಉಟ್ಟ ಬಟ್ಟೆಯ ಮೇಲೆಯೇ ಬಾವಿಯಲ್ಲಿ ಜಿಗಿದು ಆ ಮಗುವನ್ನು ಮೇಲೆತ್ತಿ ತಂದು ಬಾವಿಯ ಮೇಲೆ ಹಾಕಿದರು. ನಂತರ ಆ ಹುಡುಗನ ತಾಯಿ ಕಾ.ಹು. ಅವರು ಮಗುವಿನ ಜೀವ ಉಳಿಸಿದ್ದಕ್ಕಾಗಿ ಅವರ ಕಾಲು ಬಿದ್ದು ದೇವರೆಂದೇ ಕೊಂಡಾಡಿದಳು. ಜೀವಾಪಾಯದಿಂದ ಪಾರಾದ ಮಾರುತಿ ಕಿರಗತ ಇಂದಿಗೂ ಕಾ.ಹು. ಅವರನ್ನು ನೆನೆಯದೇ ಇರುವುದಿಲ್ಲ.

### ೩. ಎತ್ತುಗಳ ಪ್ರಾಣ ರಕ್ಷಕ :

ಗೊಳಸಂಗಿ ಗ್ರಾಮ ತೋಟಗಳು ನೀರಾವರಿಯಿಂದ ಕೂಡಿದ್ದು, ಬಾವಿಯಿಂದ ಬೆಳೆಗೆ ನೀರು ಹಾಯಿಸಲು ಮಟ್ಟಿಯನ್ನೇ ಎಲ್ಲರೂ ಅವಲಂಬಿಸಬೇಕಿತ್ತು. ಯಾಕೆಂದರೆ ೧೯೫೮ರ ವೇಳೆಗೆ ಗೊಳಸಂಗಿಯಲ್ಲಿ ಕರೆಂಟ್ ಪಂಪಸೆಟ್ಟೇ ಇರಲಿಲ್ಲ. ಎಲ್ಲರೂ ಮಟ್ಟಿ ಹೊಡೆದು ತೋಟ ಮಾಡಿ ಕೊಂಡಿದ್ದರು.

ಕಾ.ಹು. ಅವರು ಮೂಲತ: ರೈತರಾಗಿದ್ದರಿಂದ ಒಕ್ಕಲುತನದ ಎಲ್ಲ ಕೆಲಸಗಳನ್ನೂ ಮಾಡಿ ಕೊಂಡಿದ್ದರು. ಕೆಲವೆಡೆ ಎರಡೆತ್ತಿನ ಮಟ್ಟಿಬಾರಿ, ಹಲವೆಡೆ ನಾಲ್ಕೆತ್ತಿನ ಮಟ್ಟಿಬಾರಿಗಳಿದ್ದವು. ಅಂದು ಕಾ.ಹು. ಅವರು ಹಾಡುತ್ತ ಎರಡತ್ತಿನ ಮಟ್ಟಿ

ಹೊಡೆಯುತ್ತಿದ್ದರೆ, ಆಳುಮಗ ಮದರಸಾಬ ನಾಲ್ಕೆತ್ತಿನ ಮಟ್ಟಿ ಹೊಡೆಯುತ್ತಿದ್ದನು. ಅದರಲ್ಲಿ ಮುಂದೆ ಹೂಡಿದ ಎರಡು ಎತ್ತುಗಳಿಗೆ ಇನ್ನೂ ಸರಿಯಾದ ತರಬೇತಿಯಾಗಿರಲಿಲ್ಲ. ತುಂಬಿದ ಮಟ್ಟಿ ಎಳೆಯುವಾಗ ಹಾದಿಯ ಕಡೆಗೆ ಜಗಿದವು. ಆಳು ಮಗ ಮದರಸಾಬ ಗಾಬರಿಯಾಗಿ ಸತ್ತೆನೊ ಎಪ್ಪಾ ಎಂದು ಗಾಬರಿಯಿಂದ ಚೀರಿದನು. ಅಲ್ಲಿಯೇ ಹತ್ತಿರದಲ್ಲಿದ್ದ ಕಾ.ಹು. ಅವರು ನೋಡಿದವರೆ, ನೀರು ತುಂಬಿದ ಮಟ್ಟಿ ಅರ್ಧದಲ್ಲಿಯೇ ನಿಂತಿತು. ಮಟ್ಟಿ ಹೊಡೆಯುವವನಿಗೆ ಎತ್ತುಗಳಿಗೆ ಪ್ರಾಣ ಭಯ ಇತ್ತು. ಹಾಗೇಯೇ ಹಿಂದೆ ಸರಿದು ಇನ್ನೇನು ಬಾವಿಯಲ್ಲಿ ಬೀಳುತ್ತವೆ ಎನ್ನುವಷ್ಟರಲ್ಲಿಯೇ ಅಲ್ಲಿಯೇ ಮಗ್ಗುಲಲ್ಲಿ ಬಿದ್ದಿರುವ ಕೊಡಲಿಯನ್ನು ತೆಗೆದು ಮಟ್ಟಿ ಮಿಣಿ ಕಡಿದರು. ಮಟ್ಟಿ ಬಾವಿಯಲ್ಲಿ ಬಿತ್ತು. ಎತ್ತುಗಳು ಮುಂದೆ ಹೋದವು. ಆಳು ಮಗ ಮಗ್ಗುಲಿಗೆ ಸರಿದನು. ಆಗ ಅಪಾಯ ತಪ್ಪಿತು. ಎತ್ತುಗಳು ಆಳು ಮಗ ಬದುಕುಳಿಯಲು ಸಾಧ್ಯವಾಯಿತು.

**ಅನ್ಯರು ಅನ್ಯಾಯ ಬಗೆದರೆ ಪುಣ್ಯವೇ ಮಾಡು :**

ನಮಗೆ ಯಾರೇ ಕೆಡಕನ್ನು ಮಾಡಲಿ, ಅನ್ಯಾಯ ಬಗೆಯಲಿ, ಆದರೆ ನಾವು ಮಾತ್ರ ಅವರಿಗೆ ಒಳ್ಳೆಯದನ್ನೇ ಮಾಡಬೇಕು. ಪುಣ್ಯದ ಕೆಲಸವನ್ನೇ ಮಾಡಬೇಕೆಂಬ ತತ್ವ ಸಿದ್ಧಾಂತದ ಹಾದಿಯಲ್ಲಿ ನಡೆದವರು ಕಾ.ಹು. ಅವರು.

ಒಂದು ಸಲ ಕಾ.ಹು. ಅವರು ಎಣ್ಣಿಮಡ್ಡಿ ತೋಟದ, ಮಾವಿನ ಗಿಡದ ನೆರಳಲ್ಲಿ ನಾರಿನಿಂದ ಹಗ್ಗ ಹೊಸೆಯುತ್ತ ಕುಳಿತ್ತಿದ್ದರು. ಆಗ ನೆರೆಯೂರಿನ ರೈತನೊಬ್ಬ ಗಾಡಿಯಲ್ಲಿ ಜೋಳದ ಚೀಲ ಹೇರಿಕೊಂಡು ಬಸವನ ಬಾಗೇವಾಡಿ ಸಂತೆಗೆ ಮಾರಲು ಹೊರಟ್ಟಿದ್ದನು. ಅದೇ ಸಮಯದಲ್ಲಿ ಕಾಸೀಮಸಾಬರ ಮಗ ಮಹಿಬೂಬನಿಗೆ ಉರಿ ಬಂದಿದ್ದರಿಂದ ಸಾಹೇಬಬೀಬಿ ಉಡಿಯಲ್ಲಿ ಕಟ್ಟಿಕೊಂಡು ಬಂದಿದ್ದಳು. ಮಗನನ್ನು ಬಾಗೇವಾಡಿ ದಾನಪ್ಪ ಡಾಕ್ಟರರಲ್ಲಿಗೆ ಕರೆದೊಯ್ಯುವಂತೆ ಅಂಗಲಾಚಿಕೊಂಡಳು. ಆಗ ಗೊಳಸಂಗಿಯಿಂದ ಬಾಗೇವಾಡಿಗೆ ಹೋಗಲು ಬಸ್ಸಿನ ಸೌಕರ್ಯಗಳಿರಲಿಲ್ಲ, ಜೋಳ ಮಾರಲು ಹೊರಟ ರೈತನ ಎತ್ತಿನ ಗಾಡಿ ತರುಬಿ ತಮ್ಮನ್ನೂ ಕರೆದೊಯ್ಯಲು ಪರಿಪರಿಯಾಗಿ ಕೇಳಿಕೊಂಡರು.

ಆದರೆ ಕಲ್ಲು ಹೃದಯದ ಆ ರೈತನು ಇವರ ಮಾತಿಗೆ ಕಿವಿಗೊಡದೆ, ಎತ್ತುಗಳಿಗೆ ಹೊಡೆದು, ಗಾಡಿ ಓಡಿಸ ತೊಡಗಿದನು. ಇನ್ನು ಬೇರೆ ಯಾವುದೇ ದಾರಿ ಕಾಣದೇ ಕಾ.ಹು. ಅವರು, ಮಗ ಮಹಿಬೂಬನನ್ನು ಹೆಗಲ ಮೇಲೆ ಕೂಡ್ರಿಸಿಕೊಂಡು ಸಮೀಪದ ಮುತ್ತಗಿ ಗ್ರಾಮದವರೆಗೆ ನಡೆದು ಹೋಗಿ ಅಲ್ಲಿಂದ ಬಸ್ಸು ಹಿಡಿದು ಬಸವನ ಬಾಗೇವಾಡಿಗೆ ಹೋಗಿ ಡಾಕ್ಟರರಲ್ಲಿಗೆ ತೋರಿಸಿಕೊಂಡು ಮಗನನ್ನು

ಮನೆಯಲ್ಲಿ ಬಿಟ್ಟು ಮತ್ತೆ ತೋಟಕ್ಕೆ ಬಂದು ತಮ್ಮ ಕಾಯಕದಲ್ಲಿ ಮುಂದುವರೆದರು.

ಆಗ ಸಂಜೆ ಐದರ ಸಮಯ. ಜೋಳ ಮಾರಲು ಹೋದ ರೈತ ಮರಳಿ ತಮ್ಮೂರಿಗೆ ಹೋಗುವಾಗ ಕಾಸೀಮಸಾಬರ ತೋಟದಲ್ಲಿ ನೀರು ಕುಡಿಯಲು ಎತ್ತುಗಳು ಗಬಕ್ಕನೆ ಹೊರಳಲು ಎತ್ತಿನ ಗಾಡಿ ಒಗ್ಗಾಲ್ಯಾಗಿ ಬಿತ್ತು. ರೈತ ಗಾಲಿಯ ಕೆಳಗೆ ಸಿಲುಕಿಕೊಂಡಿದ್ದನು. ಇದನ್ನು ನೋಡಿದ ಕಾ.ಹು. ಅವರು ತಕ್ಷಣವೇ ಆಳುಗಳನ್ನು ಕರೆದು ಗಾಡಿಯನ್ನು ಎತ್ತಿ ರೈತನನ್ನು ಉಳಿಸಿದರು. ರೈತ ತಾನು ಮಾಡಿದ ಅಪಕಾರಕ್ಕೆ ತಕ್ಕ ಶಿಕ್ಷೆಯಾಯಿತೆಂದು ಕಾಸೀಮಸಾಬರನ್ನು ನೆನೆದು ಅಳತೊಡಗಿದನು. ನಾನು ನಿಮಗೆ ಕೆಡಕನ್ನು ಬಗೆದರೂ ನನಗೆ ಒಳಿತನ್ನು ಬಗೆದಿರಲ್ಲಾ ಎಂದು ಕ್ಷಮೆ ಕೇಳಿಕೊಂಡನು.

ಈ ರೀತಿಯಾಗಿ ಕಾ.ಹು. ಅವರು ತಮ್ಮ ಬದುಕಿನಲ್ಲಿ ಮಾಡಿದ ಸಾಹಸ ಗಾಥೆಗಳು ಇತರರಿಗೆ ಮಾದರಿಯಾಗುವಂಥ ಅನೇಕ ಸಂಗತಿಗಳು ಗ್ರಾಮದ ಜನರ ಹೃದಯಯದಲ್ಲಿ ಹುದುಗಿಕೊಂಡಿವೆ.

**ಸಂದ ಪ್ರಶಸ್ತಿಗಳು :**

ಕಾ.ಹು. ಅವರ ಕಾರ್ಯ ದಕ್ಷತೆ, ಜೀವನ ಸಾಧನೆ ಗಮನಿಸಿ ಗ್ರಾಮದ ನಾಗರಿಕರು, ಸಂಘ-ಸಂಸ್ಥೆಯವರು, ಹಲವಾರು ಬಿರುದು ನೀಡಿ ಸನ್ಮಾನಿಸಿವೆ. ಗೊಳಸಂಗಿಯ ದೇವಾಂಗ ಸಮಾಜದವರು 'ಗ್ರಾಮ ಭೂಷಣ', ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾವರ್ಧಕ ಸಂಘ ಗೊಳಸ ಇವರು 'ಶಿಕ್ಷಣ ಪ್ರೇಮಿ', ಇಲಕಲ್ಲದಲ್ಲಿ ನಡೆದ ನಾಟಕೋತ್ಸವದಲ್ಲಿ 'ಉತ್ತಮ ನಾಟಕಕಾರ', ಗೊಳಸಂಗಿಯ ಸಿಂಡಿಕೇಟ್ ಬ್ಯಾಂಕಿನವರು 'ಆದರ್ಶ ರೈತ', ಹಲಸಂಗಿಯಲ್ಲಿ ಜರುಗಿದ ಜಾನಪದ ಕಲಾಮೇಳದಲ್ಲಿ 'ಜಾನಪದ ತಜ್ಞ', ಗೊಳಸಂಗಿಯ ಮಂಡಲ ಪಂಚಾಯಿತಿ ವತಿಯಿಂದ 'ಸಮಾಜ ಸೇವಕ', ವಿಜಾಪೂರ ಜಿಲ್ಲಾ ಸಾಹಿತ್ಯ ಸಂಸ್ಕೃತಿ ಸಂಘದಿಂದ 'ಭಾವೈಕ್ಯ ಬಂಧು', ಕರ್ನಾಟಕ ಸರಕಾರದ 'ಕನ್ನಡ ರಾಜ್ಯೋತ್ಸವ ಪ್ರಶಸ್ತಿ', ಯಕ್ಷಗಾನ ಮತ್ತು ಜಾನಪದ ಅಕಾಡೆಮಿಯ 'ಜಾನಪದ ಪ್ರವರ್ಧಕ ಪ್ರಶಸ್ತಿ' ಬಂದಿರುವುದು ಕಾ.ಹು. ಅವರ ಅರ್ಥಪೂರ್ಣ ಬದುಕು-ಸಾಧನೆಗೆ ಹಿಡಿದ ರನ್ನಗನ್ನಡಿಯಾಗಿವೆ.

ಇವಲ್ಲದೆ ಸಾವಳಗಿ, ಸಿಂದಗಿ, ಬಸವನ ಬಾಗೇವಾಡಿ, ನಿಡಗುಂದಿ, ಮುತ್ತಗಿ, ಕನ್ನೂರ, ಕಲಬುರ್ಕಿ, ಮುರಗೋಡ, ಇಂಗಳೇಶ್ವರ, ಬಿದರಕುಂದಿ, ಮಸೂತಿ, ಕೂಡಗಿ, ಬೀರಲದಿನ್ನಿ, ಮೂಕಾರ್ತಿಹಾಳ, ಹಂಗರಗಿ ಮುಂತಾದ ಗ್ರಾಮಗಳಾದಿಯಾಗಿ ಜನತೆ ಇವರನ್ನು ಸನ್ಮಾನಿಸಿ ಗೌರವಿಸಿದ್ದಾರೆ.

ಗ್ರಾಮೀಣ ಪ್ರದೇಶದ ಒಬ್ಬ ವ್ಯಕ್ತಿಯನ್ನು ಇಷ್ಟೊಂದು ಬಿರುದು ಸನ್ಮಾನಗಳು ಅರಸಿಕೊಂಡು ಬರುತ್ತವೆ ಎಂದರೆ, ಕಾ.ಹು. ಅವರ ವ್ಯಕ್ತಿತ್ವ ಎಂತಹದೆಂದು ಮತ್ತೆ ಹೇಳಬೇಕಿಲ್ಲ.

**ಸಮಾರೋಪ :**

ಕಾ.ಹು. ಕನ್ನಡ ನಾಡು ಕಂಡ ಅಪರೂಪದ ವ್ಯಕ್ತಿ. ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿ ಗ್ರಾಮದ ಇತಿಹಾಸದಲ್ಲಿ ಒಂದು ಮೈಲುಗಲ್ಲು. ಕಾ.ಹು. ಬದುಕಿದ ದಾರಿ ಮಾಡಿದ ಸಾಧನೆ ಪುಸ್ತಕದ ಪುಟದಲ್ಲಿ ಹಿಡಿದಿಡಲು ಸಾಲದು. ಪ್ರತಿಭಾವಂತ, ವಿಚಾರ ಸಂಪನ್ಮೂಲ ವ್ಯಕ್ತಿ. ಗ್ರಾಮಾಭಿವೃದ್ಧಿಯಲ್ಲಿ ಯಾವುದೇ ಕೆಲಸ ಬರಲಿ, ಇರಲಿ, 'ಇದು ನನ್ನಿಂದ ಸಾಧ್ಯವಿಲ್ಲ' ಎಂಬ ಮಾತೇ ಅವರ ಶಬ್ದಕೋಶದಲ್ಲಿ ಇರಲಿಲ್ಲ ಎನ್ನಬೇಕು.

ಜೀವನ ಒಂದು ಹೋರಾಟ. ಅದರಲ್ಲಿ ಹೋರಾಡಿಯೇ ಗೆಲ್ಲಬೇಕೆಂಬ ಮನೋಭೂಮಿಕೆಯ ವ್ಯಕ್ತಿ. ಕವಿ ಬೇಂದ್ರೆಯ ಕಾವ್ಯ ಇವರ ಜೀವನಕ್ಕೆ ದೀಪ ದಾರಿ "ರಸವೇ ಜನನ, ವಿರಸವೇ ಮರಣ, ಸಮರಸವೇ ಜೀವನ" ಎಂಬುದನ್ನು ಅನುಸರಿಸಿದವರು. ಮೇಣದ ಬತ್ತಿಯ ಬದುಕು ಇವರದು. ಪ್ರತಿಕ್ಷಣ, ಪ್ರತಿದಿನ ಊರಿನ ಅಭಿವೃದ್ಧಿಯ ಕನಸು, ಕೈಕಟ್ಟಿ ಎಂದೂ ಕುಳಿತವರಲ್ಲ. ಸದಾ ನಡೆಯುತ್ತಲೇ ಇರಬೇಕೆನ್ನುವವರು. ನಡೆಯುವಾಗ ಎಡವಿದ್ದು ತುಂಬಾ ಕಡಿಮೆ. ಅಂತಹ ಪ್ರಜ್ಞಾವಂತ ವ್ಯಕ್ತಿ ಕಾ.ಹು.

ಬದುಕಿನ ಪಯಣದ ಹಾದಿಯಲ್ಲಿ ತಪ್ಪುವುದು ಸಹಜ. ತಪ್ಪು ಮಾಡದೇ ಇರುವವರು ಯಾರೂ ಇಲ್ಲ ನಿಜ. ಆದರೆ ತಾವು ತುಳಿಯುತ್ತಿರುವ ಹಾದಿ ತಪ್ಪು ಎಂದು ಮನವರಿಕೆಯಾಗಿಯೂ ಅದನ್ನು ಬಿಡದಿದ್ದರೆ ತಪ್ಪು. ಈ ತಪ್ಪನ್ನು ಕಾ.ಹು. ಅವರು ಜೀವನದಲ್ಲಿ ಒಮ್ಮೆಯೂ ಮಾಡಲಿಲ್ಲ. ತುಳಿದ–ತುಳಿಯುವ ಹಾದಿ ತಪ್ಪು ಎಂದು ಮನಗಂಡು ಅದನ್ನು ಬಿಟ್ಟು ಜೀವನದ ದಿಕ್ಕನ್ನೇ ಬದಲಾಯಿಸಿಕೊಂಡದ್ದು ಉಂಟು. ತಾವೂ ಹೊಸ ಬದುಕು ಕಟ್ಟಿಕೊಂಡರು. ತಮ್ಮನ್ನು ನಂಬಿದವರಿಗೂ ಬದುಕನ್ನು ಕಟ್ಟಿಕೊಟ್ಟರು. ಗಾಂಧೀಜಿಯ ಸರಳ ಜೀವನ ಉನ್ನತ ವಿಚಾರ ಸರ್ವೋದಯದ ಚಿಂತಕ ಬುದ್ಧನ ಕರುಣೆ, ಏಸುವಿನ ಕ್ಷಮೆ, ಬಸವನ ಕಾಯಕ ನಿಷ್ಠೆ ಇವರ ಜೀವನದಲ್ಲಿ ಹಾಸು ಹೊಕ್ಕಾಗಿವೆ.

ಕಾ.ಹು. ಅವರ ಬದುಕಿನ ದೃಷ್ಟಿಕೋನ ಅನುಕರಣೀಯ. ತಾವೂ ಬದುಕಿ ಇನ್ನೊಬ್ಬರಿಗೂ ಬದುಕಲು ಅವಕಾಶ ಮಾಡಿ ಕೊಡಬೇಕೆಂಬ ತತ್ವದವರು. ಉತ್ತಮ ಸಮಾಜ ನಿರ್ಮಾಣಕ್ಕಾಗಿ ಕನಸು ಕಟ್ಟಿ ನನಸು ಮಾಡಲು ಹಗಲಿರುಳು

ಶ್ರಮಿಸಿದವರು. ಸಂಕುಚಿತತೆ, ಸ್ವಾರ್ಥ ಇವರ ಸನಿಹ ಒಮ್ಮೆಯೂ ಅಪ್ಪಿತಪ್ಪಿ ಸುಳಿಯಲಿಲ್ಲ ಎನ್ನಬೇಕು.

ಕಾ.ಹು. ಅವರ ಸ್ವಭಾವ ಎಂತಹದ್ದೆಂದರೆ, ಅವರ ತಲೆಯಲ್ಲಿ ಯಾವುದೋ ಒಂದು ಒಳ್ಳೆಯ ವಿಚಾರ ಒಮ್ಮೆ ಸುಳಿದು ಹೋದರೆ ಮುಗಿಯಿತು. ಅದು ಅವರನ್ನು ಹುಚ್ಚು ಹಿಡಿಸಿಬಿಡುತ್ತಿತ್ತು. ಆ ವಿಚಾರ–ಉದ್ದೇಶ ಅವರಲ್ಲಿ ಯಾವಾಗಲೂ ಮಹಾ ಅಗ್ನಿಯಾಗಿ ಹೊತ್ತಿಕೊಂಡು ಉರಿದಂತೆ ಉರಿಯುತ್ತಲೇ ಇರುತ್ತದೆ. ಅದು ಮುಗಿಯುವವರೆಗೆ ಬಿಡುವ ಜಾಯಮಾನದವರಲ್ಲ. ಅಂತಹ ಸಾಧಕರು ಕಾ.ಹು. ಮತ್ತು ಎಲ್ಲವನ್ನೂ ನಾನೇ ಮಾಡಿದ್ದೇನೆಂಬ ಭಾವ ಇವರದ್ದಲ್ಲ.

'ಛಲ ಬೇಕು ಶರಣಂಗೆ' ಎನ್ನುವಂತೆ ಒಳ್ಳೆಯದಕ್ಕಾಗಿ ಛಲ ಬಿಡದೇ ಸಾಧಿಸುವ ಸಾಧಕ. ಪ್ರಗತಿಪರ ಚಿಂತನೆಯ ಚಿಲುಮೆ. ಸದಾ ಸಂಘರ್ಷದ ಬದುಕು. ಅನ್ಯಾಯ ಕಂಡಲ್ಲಿ ತಕ್ಷಣವೇ ಬಂಡೇಳುವ ಪ್ರತಿಭಟಿಸುವ ಗುಣ ಹೊಂದಿದವರು.

ಕಾ.ಹು. ಕೃಷಿ ಮಾಡದ ಕ್ಷೇತ್ರವೇ ಇಲ್ಲವೆನ್ನಬೇಕು. ಕೃಷಿ, ಸಾಹಿತ್ಯ, ಜನಪದ, ರಂಗಭೂಮಿ, ಶಿಕ್ಷಣ, ಸಮಾಜ, ಧಾರ್ಮಿಕ, ಪತ್ರಿಕೋದ್ಯಮ ಒಂದೇ ಎರಡೇ ಹತ್ತಾರು ರಂಗದಲ್ಲಿ ನಿರಂತರವಾಗಿ ದುಡಿದ ಜೀವ ಅದು. ಪರೋಪಕಾರಕ್ಕಾಗಿಯೇ ತಮ್ಮ ಇಡೀ ಜೀವಮಾನ ಸವೆಸುತ್ತ ಬಂದ ಧೀಮಂತ ವ್ಯಕ್ತಿತ್ವ ಅವರದು.

ಗೊಳಸಂಗಿ ಗ್ರಾಮದ ಚೈತನ್ಯವೆಂದರೆ ಕಾಹು ಎನ್ನಬೇಕು. ಗ್ರಾಮಾಭಿವೃದ್ಧಿಗಾಗಿ ನಾಲ್ಕೈದು ದಶಕಗಳವರೆಗೆ ಗಂಧದಂತೆ ತಮ್ಮ ಜೀವವನ್ನು ತೇದವರು. 'ನೇರ ನಡೆ–ನುಡಿ'ಯ ಕಠೋರ ಮಾತು ಕರುಣೆಯ ಹೃದಯ ಅವರದು. ಪ್ರಬುದ್ಧ, ಚಿಂತನಾಶೀಲ, ಕ್ರಿಯಾಶೀಲ, ಸ್ನೇಹಜೀವಿ, ಸೊಗಸಾದ ಮಾತುಗಾರ, ಗೆಳೆಯರ ಬಳಗದ ರೂವಾರಿ, ಹೃದಯವಂತ, ನೇಗಿಯೋಗಿ, ಪರಹಿತ ಚಿಂತಕ ಎಂದೆಲ್ಲಾ ಅವರ ಗೆಳೆಯರ ಬಳಗದ ವರು ಗುಣಗಾನಿಸಿದ್ದಾರೆ.

'ಕಾ.ಹು. ನಮ್ಮೂರಿನ ಗೌರವ ನಿಧಿಯಿದ್ದಂತೆ ಎಂದು ಅವರ ಒಡನಾಡಿಗಳು ಹೇಳುತ್ತಾರೆ.' 'ಹಿರಿಯರಲ್ಲಿ ಹಿರಿಯರಾಗಿ, ಗೆಳೆಯರಲ್ಲಿ ಗೆಳೆಯರಾಗಿ, ಮಕ್ಕಳಲ್ಲಿ ಮಕ್ಕಳಾಗಿ' ಬೆರೆವ ಗುಣ ಅವರದು. ಇವರ ವ್ಯಕ್ತಿತ್ವವೇ ಒಂದು ಪಾದರಸದಂತೆ, ಹಿಮಾಲಯ ಬೆಟ್ಟದಂತೆ ಎಂದೆನ್ನಬಹುದು. ಕಾಹು ಅವರ ಜೀವನ ಒಂದು ಮಹಾ ನದಿಯಂತೆ ಎಲ್ಲರನ್ನು ಎಲ್ಲವನ್ನು ಮಾತು–ಕೃತಿಯ ಮೂಲಕ ಸೆರೆ ಹಿಡಿಯುವ ಅಭಿವ್ಯಕ್ತಿಸುವ ವಿಶಿಷ್ಠ ವ್ಯಕ್ತಿತ್ವ ಅವರದು. 'ಅರಿತಡೆ ಶರಣ, ಮರೆತಡೆ ಮಾನವ' ಎನ್ನುವ ನಿಲುವಿನ ಸರಳ ಸಹಜ ಬದುಕಿನ ಎಂದೂ ಯಾರೂ ಮರೆಯದ 'ಸಾರ್ಥಕ ಬದುಕಿನ ಸಂತ: ಕಾ.ಹು. ಬಿಜಾಪೂರ' ಎನ್ನಬೇಕು.

ಶರಣರ ನೆನೆದರ ಸರಗೀಯ ಇಟ್ಟಾಂಗ
ಹವಳ ಮಲ್ಲೀಗಿ ಮುಡಿದ್ದಾಂಗ/ಕಲ್ಯಾಣ
ಶರಣರ ನೆನೆಯೊ ಎಲೆಮನವೆ.

# ಅನುಬಂಧಗಳು

## ೧. ಕಾ.ಹು. ಅವರ ಬಗೆಗೆ ಗಣ್ಯರ

## ಅಭಿಪ್ರಾಯಗಳು

ಗೋಳಸಂಗಿಯ ಶರಣರಾದ ಕಾಶೀಮಸಾಬ ಎಂದರೆ ನನ್ನ ಅಂಗೈಯಲ್ಲಿರುವ ಲಿಂಗವಿದ್ದಂತೆ .ಅವರನ್ನು ಕಂಡಾಗ ನನಗೆ ಲಿಂಗ ಪೂಜೆ ಮಾಡಿದಷ್ಟೇ ಸಂತೋಷವೆನಿಸುತ್ತದೆ.

–ಪೂಜ್ಯ ಶ್ರೀ ಮ.ನಿ.ಪ್ರ. ಮಹಾಂತಸ್ವಾಮಿಗಳು
ಇಳಕಲ್ಲ

ಹಿಂದೂ ಮುಸ್ಲಿಂ ಬಾಂಧವರಲ್ಲಿ ಭಾವೈಕ್ಯತೆಯನ್ನು ಬೆಸೆದ, ಕರ್ನಾಟಕ ಅಷ್ಟೇ ಏಕೆ, ಭಾರತದ ಧರ್ಮ ಸಮನ್ವಯದ ಇತಿಹಾಸದಲ್ಲಿ ಅಜರಾಮರವಾಗಿ ಉಳಿಯಬಲ್ಲ ಭಾವೈಕ್ಯ ಬಂಧುವಾದ ಕಾಸೀಮಸಾಬ ಬಿಜಾಪೂರ ಅವರನ್ನು ಸನ್ಮಾನಿಸಿ ಗೌರವಿಸಲು ನನಗೆ ಅತೀವ ಆನಂದವಾಗುತ್ತದೆ.

– ಜಗದ್ಗುರು ಶಿವಲಿಂಗೇಶ್ವರ ಕುಮಾರೇಂದ್ರ ಮಹಾಸನ್ನಿಧಿ
ಸಾವಳಗಿ

ಭಕ್ತಿ, ಜ್ಞಾನ, ಕ್ರಿಯೆಯಲ್ಲಿ ನಿಷ್ಠೆಯಿಂದ ಸದಾ ನಿರತರಾದ ಶರಣ ಕಾಶೀಮಸಾಬರೇ ತನ್ನ ಧರ್ಮ ತನಗೆ ಶ್ರೇಷ್ಠ, ಅನ್ಯ ಧರ್ಮಗಳನ್ನು ಅನನ್ಯ ಶ್ರದ್ಧೆಯಿಂದ ಗೌರವುಸುವುದು ಮಾನವ ಧರ್ಮದ ಮುಖ್ಯ ಲಕ್ಷಣ. ಈ ದಿಶೆಯಲ್ಲಿ ಭೂಮಾತೆಯ ಹಾಗೂ ಸರಸ್ವತಿಯ ಕಿಂಕರರಾದ ನೀವು ಸರ್ವಧರ್ಮಗಳನ್ನು ಸಮಭಾವದಿಂದ ಆಧರಿಸುವ ಆದರ್ಶ ಜೀವಿಗಳು.

– ಶ್ರೀ ಮ.ನಿ.ಪ್ರ. ದಯಾನಂದ ಮಹಾಸ್ವಾಮಿಗಳು
ಯರನಾಳ

ಪ್ರಾಂಜಲ ಮನಸ್ಸಿನ ಕಾಸೀಮಸಾಬರೇ ಸಕಲರಿಗೂ ಲೇಸನ್ನೇ ಬಯಸುವ ತಮ್ಮ ರಚನಾತ್ಮಕವಾದ ಚಟುವಟಿಕೆಗಳನ್ನು ನೋಡಿದರೆ, ಅಂಗುಲಿಮಾಲ ಹಾಗೂ

ಬುದ್ಧನ ಹಾಗೆ. ಮನಸ್ಸು ಮನಸ್ಸುಗಳನ್ನು ಬೆಸೆಯುವ, ಹೃದಯಗಳನ್ನು ಕೂಡಿಸುವ ಭಾವೈಕ್ಯದ ಸೇತುವೆಯಾಗಿದ್ದೀರಿ.

–ಪೂಜ್ಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು
ಬಿದರಕುಂದಿ–ಮಡಿಕೇಶ್ವರ

ಕಾ.ಹು. ಬಿಜಾಪೂರ ಅವರು ಹಿಂದೂಗಳೆಂದೇ ನಾನು ಭಾವಿಸಿದ್ದೇನೆ. ಅವರ ವೇಷ–ಭೂಷಣ, ಆಚಾರ–ವಿಚಾರ ಹಾಗೂ ಕನ್ನಡ ಭಾಷೆ ಮಾತನಾಡುವ ಶೈಲಿಯನ್ನು ನೋಡಿದಾಗ, ಅವರು ಮಹಮ್ಮದೀಯರೆಂದು ಅನ್ನಿಸುವುದೇ ಇಲ್ಲ. ಇವರ ಹೆಸರು ಕಾಶೀಮಸಾಹೇಬ ಎಂಬುದು ಇಂದು ತಿಳಿದಾಗ ಅಚ್ಚರಿಯಾಯಿತು. ಇವರು "ಗೋಳಸಂಗಿಯ ಗುಮ್ಮಟ" ಇದ್ದ ಹಾಗೆ. ದೇವಾಂಗ ಸಮಾಜದವರು ಇಂದು ಇವರಿಗೆ "ಗ್ರಾಮ ಭೂಷಣ" ಬಿರುದು ನೀಡಿ ಸನ್ಮಾನಿಸುತ್ತಿರುವುದು ಇಡೀ ಗೋಳಸಂಗಿ ಗ್ರಾಮವನ್ನೇ ಗೌರವಿಸಿಕೊಂಡತಾಗಿದೆ.

ಶ್ರೀ ಬಿ. ಎಸ್. ಪಾಟೀಲ (ಸಾಸನೂರ)
ಮಾಜಿ ಶಾಸಕರು, ಹೂವಿನಹಿಪ್ಪರಗಿ

ಭಾವೈಕ್ಯದ ಬಂಧುವಾದ ಕಾಶೀಮಸಾಬರು ಹಿಂದೂ ಮುಸ್ಲಿಂ ಸಂಗಮದ ಸಮಭಾವ ಜೀವಿ.

ಶ್ರೀ ಎಚ್. ಎಲ್. ನಾಗೇಗೌಡ
ಬೆಂಗಳೂರು

ಜಾನಪದ ವಿಚಾರ ಧಾರೆಯನ್ನು ಜನಮನಕ್ಕೆ ಮುಟ್ಟಿಸುವ ಕಾರ್ಯದ ಚಟುವಟಿಕೆಗಳ ಸದಾ ತೊಡಗಿಸಿಕೊಂಡಿರುವ ತಮಗೆ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಹೆಚ್ಚಿನ ಪ್ರಶಸ್ತಿಗಳು ಲಭಿಸುವಂತಾಗಲಿ.

–ಶಂ.ಗು. ಬಿರಾದಾರ
ವಿಜಾಪೂರ

ಜಾನಪದಕ್ಕಾಗಿ ಜೀವತೆತ್ತು ಅದರ ಶುಚಿ ರುಚಿಗೆ ಸ್ಪಂದಿಸಿ, ಜಾನಪದ ಸಾಹಿತ್ಯವನ್ನು ಪ್ರಚುರಪಡಿಸಿದ ತಮಗೆ ಸಂದ ಗೌರವ ನನಗಂತೂ ಹಬ್ಬದ ಸವಿಯನ್ನು ಉಂಟು ಮಾಡಿತು.

– ಈಶ್ವರಚಂದ್ರ ಚಿಂತಾಮಣಿ
ಬಿಜಾಪೂರ

ನಿರಪೇಕ್ಷ ಸೇವಕರಾದ ತಮ್ಮನ್ನು ಕರ್ನಾಟಕ ಸರಕಾರವು ಗುರುತಿಸಿ ಗೌರವಿಸಿದ್ದು ತುಂಬಾ ಸ್ತುತ್ಯ. ನಿಮ್ಮ ಸದಾ ಕರ್ತವ್ಯ ನಿರತ ಪ್ರಜ್ಞೆ ಇದರಿಂದ ಮತ್ತಷ್ಟು ಹೆಚ್ಚಾಗುವುದರಲ್ಲಿ ಸಂದೇಹವಿಲ್ಲ.

–ಅರ್ಜುನ ಕೋರಟಕರ
ಜಮಖಂಡಿ

ನಿಮ್ಮ ನಿತ್ಯ ಪರಿಶ್ರಮ, ಸಾಹಿತ್ಯ ಸಂಸ್ಕೃತಿಗಳಲ್ಲಿ ಇರಿಸಿದ ಶ್ರದ್ಧೆ, ಆಸಕ್ತಿಗಳ ಪ್ರತಿ ಫಲವಾಗಿ ತಾವು ಪ್ರಶಸ್ತಿಗೆ ಮಾನ್ಯರಾಗಿದ್ದೀರಿ. ಹಾಗೂ ನಮ್ಮ ಸಾಹಿತ್ಯ ಸಂಗಮ, ಮಕ್ಕಳ ಸಾಹಿತ್ಯ ವೇದಿಕೆಗೆ ಶ್ರೇಯಸ್ಸು ತಂದಿದ್ದೀರಿ.

–ಕಂಚ್ಯಾಣಿ ಶರಣಪ್ಪ
ವಿಜಾಪೂರ

ಹಿಂದೂ ಮುಸ್ಲಿಂ ಸಮಾಜವನ್ನು ಜೋಡಿಸುವಲ್ಲಿ ನಿಸ್ಸೀಮರಾದ, ಭಾವೈಕ್ಯದ ಬಂಧು ಎನಿಸಿದ, ಸೌಖ್ಯದ ಸಿಂಧು ಎನಿಸಿದ, ಜೀವನದಲ್ಲಿ ಸಾಹಿತ್ಯದ ಕಾವನ್ನು ಎಂದೂ ಆರಗೊಡದ ಕಾ.ಹು. ಬಿಜಾಪೂರ ಅವರು ಅದಕ್ಕೂ; ಇದಕ್ಕೂ, ಎದಕ್ಕೂ ತಾನೇ ಮುಂದಾಗಿ ಮನದಣಿ ದುಡಿದು ಊರ ಹೆಸರನ್ನು ಉಳಿಸಿ ಬೆಳೆಸುವ ಹೆಮ್ಮೆಯ ಪುತ್ರ.

–ಪ್ರಾ. ಸಿದ್ದಣ್ಣ ಕನಮಡಿ
ವಿಜಾಪೂರ

ನಾಲ್ಕು ದಶಕಗಳಿಂದಲೂ ನೀವು ನಿರಂತರ ನಡೆಸಿಕೊಂಡು ಬಂದಿರುವ ಸಾಹಿತ್ಯ ಚಟುವಟಿಕೆಗಳು ಹಾಗೂ ಚಿಂತನೆಗಳು ನಾಡಿಗೆ ಪರಿಚಿತವಾಗಿವೆ. ಎಲ್ಲಕಿಂತಲೂ ಮಿಗಿಲಾಗಿ ತಮ್ಮ ಹೃದಯ ಶ್ರೀಮಂತಿಕೆ ಹಾಗೂ ಸೌಹಾರ್ದತೆ ನನ್ನ ಮನಸ್ಸಿನ ಮೇಲೆ ಗಾಢವಾದ ಪರಿಣಾಮ ಬೀರಿದೆ.

–ಜಯವಂತ ಕಾಡದೇವರ
ಬನಹಟ್ಟಿ

ಜಾನಪದ ಕ್ಷೇತ್ರದ ಉಳಿವು ಹಾಗೂ ಬೆಳವಣಿಗೆಗಾಗಿ ನೀವು ಅಹರ್ನಿಸಿ ದುಡಿಯುವವರು. ನಿಮ್ಮ ಪ್ರೇರಣೆಯ ಕಾರ್ಯ ಭವ್ಯವಾದುದು.

ಸಂಗಮೇಶ ಗುಜಗೊಂಡ
ಮೂಡಲಗಿ

ನಿಮ್ಮ ಜಾನಪದ ಸಾಹಿತ್ಯ ಸಂಗ್ರಹ, ಸಂಶೋಧನೆ, ಸಂಪಾದನೆ, ರಚನೆ ಹಾಗೂ ಸೇವಾ ಮನೋಭಾವ ವಿಶಿಷ್ಟವಾದುದು.

ಮಹಾಂತ ಗುಲಗಂಜಿ
ಬಿಜಾಪೂರ

ನಿಮ್ಮ ಜಾನಪದೀಯ ಕೃಷಿಕ ಜೀವನ, ಜನ-ಜೀವನದಲ್ಲಿ ಬೆರೆತುಕೊಂಡು ಎಲ್ಲರೊಂದಿಗೆ ಹಂಚಿಕೊಂಡು ಉಣ್ಣುವ ಸರಳ ಸಜ್ಜನಿಕೆ ಮೆಚ್ಚುವಂತಹುದು.

ಪರುಶರಾಮ ಚಿತ್ರಗಾರ
ಜಾಲಿಹಾಳ

ಅಗೋಚರದಿಂದ ವಿರಾಟದವರೆಗೆ, ಜಾನಪದದ ಮೂಲ ದ್ವಾರದ ಬೇರು ಮೆಟ್ಟಿ ಗೌರಿಶಂಕರನ ತುತ್ತ ತುದಿ ಮುಟ್ಟಿದ ಜಾನಪದ ಪ್ರವರ್ದಕ-ಕಾ.ಹು. ಬಿಜಾಪೂರ.

ಮಂದಾಕಿನಿ ಪಂ. ಪಾಟೀಲ
ಬಿಜಾಪೂರ

ಜಾನಪದ ಕ್ಷೇತ್ರದಲ್ಲಿ ಸಾಕಷ್ಟು ದುಡಿದು ಹೆಸರು ಮಾಡಿದ ತಮ್ಮ ಬದುಕು ನಿಜಕ್ಕೂ ಹಾಲು-ಜೇನು ಸವಿದಂತೆ.

ಬಿ.ಎಂ. ಪಾಟೀಲ
ಬಿಜಾಪೂರ

ಜಾನಪದ ಬದುಕು-ಸಾಹಿತ್ಯಗಳನ್ನು ಉಸಿರಾಗಿಸಿಕೊಂಡು, ಆದರ್ಶ ಜೀವನ ಸಾಗಿಸುತ್ತ, ರಚನಾತ್ಮಕ ಕಾರ್ಯಗಳಲ್ಲಿ ಮಗ್ನವಾಗಿರುವ ನಿಮಗೆ ಸಂಕ್ರಮಣದ ಪರ್ವ ಕಾಲದಲ್ಲಿ ಬಂದ ಪ್ರಶಸ್ತಿ ಚೈತನ್ಯದ ಚಿಲುಮೆಯಾಗಲಿ.

ಪ್ರಾ. ಬಿ.ಎಂ. ತಳಗಡೆ
ಇಲಕಲ್ಲ

ಉತ್ತರ ಕರ್ನಾಟಕದಲ್ಲಿ ಜಾನಪದ ತಜ್ಞರಲ್ಲಿ ಕಾ.ಹು. ಬಿಜಾಪೂರ ಒಂದು ಮೇಲ್ಪಂಕ್ತಿಯ ಹೆಸರು.

-ಡಾ. ಯಲಗೂರೇಶ ಸಂಕನಾಳ
ಬಿಜಾಪೂರ

ತಮ್ಮನ್ನು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ರಾಜ್ಯ ಪ್ರಶಸ್ತಿ ನೀಡುರುವುದು ನಿಮಗಾದ ಸಂತೋಷಕ್ಕಿಂತ ನನಗಾದ ಸಂತೋಷವೇ ಹೆಚ್ಚು.

–ಯಳಸಂಗಿ ಕಲ್ಲಣ್ಣ
ಸಾಲೋಟಗಿ

ತಮ್ಮ ಕಾರ್ಯ ಸಾಧನೆ ಹಾಗೂ ವ್ಯಕ್ತಿತ್ವ ಸಾಹಿತ್ಯ ಕ್ಷೇತ್ರಕ್ಕೆ ಮುಕುಟವಿಟ್ಟಂತೆ. ಕಾ.ಹು. ಹುಟ್ಟಿನಿಂದ ಮುಸಲ್ಮಾನರಾದರೂ ಹಿಂದೂ ಕನ್ನಡಿಗರು ನಾಚುವಂತೆ ಕನ್ನಡ ಬಳಸಬಲ್ಲರು. ರೈತನಾದರೂ ಉತ್ತಮ ಉಪನ್ಯಾಸ ನೀಡುವ ಸಾಹಿತಿ.

–ಕ್ಯಾತನಹಳ್ಳಿ ರಾಮಣ್ಣ

ಪ್ರಶಸ್ತಿಯಿಂದ ಮನುಷ್ಯ ದೊಡ್ಡವನಾಗುವುದಿಲ್ಲ ನಿಜ. ಆದರೆ ಅದು, ಇಲ್ಲೊಬ್ಬ ದೊಡ್ಡವನಿದ್ದಾನೆ ಎಂಬುದನ್ನು ವ್ಯಾಪಕವಾಗಿ ಜಾಹೀರಪಡಿಸುತ್ತದೆ ಎಂಬುದಕ್ಕೆ ತಾವು ಸಾಕ್ಷಿ.

ಸುಭಾಷ ಯಾದವಾಡ
ಬಿಜಾಪೂರ

ಜಾನಪದ ಕ್ಷೇತ್ರವು ಗುರುತಿಸಿದ ಕೆಲವೇ ಕೆಲವು ಪ್ರಬುದ್ಧ ಬರಹಗಾರರಲ್ಲಿ ಕಾ.ಹು. ಒಬ್ಬರಾಗಿದ್ದಾರೆ.

ಡಾ. ಎಂ.ಎಸ್. ಸುಂಕಾಪೂರ
ಧಾರವಾಡ

ಜಾನಪದ ಚಿಂತನಶೀಲರಲ್ಲಿ ಭಾವೈಕ್ಯತೆಗಾಗಿ ಶ್ರಮಿಸುತ್ತಿರುವ ಕಾ.ಹು. ರಾಜ್ಯದ ವಿರಳದಲ್ಲಿ ವಿರಳರು.

–ಗುರುಸ್ವಾಮಿ ಗಣಾಚಾರ
ಬಾಗಲಕೋಟ

ಗೊಳಸಂಗಿ ಗ್ರಾಮದ ಮಣ್ಣಿನ ಸತ್ವವನ್ನು ತನ್ನದಾಗಿಸಿಕೊಂಡ ಸರ್ವಧರ್ಮ ಸಮನ್ವಯ ದೃಷ್ಟಿಕೋನದ ಕಾ.ಹು. ಅಪರೂಪದ ವ್ಯಕ್ತಿ.

–ಜಂಬುನಾಥ ಕಂಬ್ಳ್ಯಾಣಿ
ಬಿಜಾಪೂರ

## ೨. ಕಾ.ಹು. ಅವರ ಆಯ್ದ ಕವಿತೆಗಳು

### ೧. ನಮ್ಮೂರು

ಗಿಡದಾಗ ಗಿಡಚಂದ ಮಾವಿನ ಗಿಡಚಂದ
ಹಕ್ಕಿ ಪಕ್ಕ್ಯಾಗ ಗಿಳಿಚಂದ । ಹಳ್ಳ್ಯಾಗ
ಗೊಳಸಂಗಿ ಚಂಧ ಬೆಳಿಯಾಕ ॥

೨

ಮಾತೀಲಿ ಮಲಕಪ್ಪ ರೀತೀಲೆ ಹುಲ್ಲಪ್ಪ
ತ್ವಾಟಾ ಮಾಡುದಕ ದಳವಾಯಿ । ಛಾತೀಲಿ
ಚನಮಲ್ಲಪ್ಪ ಮುಂದ ಕಚೇರ್‍ಯಾಗ ॥

೩

ಎತ್ತಿನಮ್ಯಾಲಿ ಪ್ರೀತಿ ಜಾಧವ ಮೂರುತಿ
ಮುತ್ತಿನಂಥ ಎತ್ತ ಕಟ್ಯಾನ। ಬಹಾದ್ದೂರ
ಸುತ್ತ ಹಳ್ಳೀಗಿ ಜಾಹೀರ॥

೪

ಆಗಿಯಾರ ಚಲ್ಯಾರ ನೀರ್‍ಯಾರ ಹಾಸ್ಯಾರ
ರೈತರು ಬಂದು ನೋಡ್ಯಾರ । ವಿಜಾಪೂರ
ಹುಸೇನ ಸಾಹೇಬ ಮಾರ್‍ಯಾರ ॥

೫

ಖಾದಿಯ ತೊಟ್ಟಾರ ಖಾದಿಯ ಉಟ್ಟಾರ
ಹಾದಿ ಪರಊರ ಹಿಡದಾರ । ತೆಳಗಡಿ
ಮೋದದಿ ಕುಲು ಕುಲು ನಗತಾರ ॥

೬

ಹತ್ತೀಯ ಕಾಯಿಹಾಂಗ ಒತ್ತಿ ರುಮಾಲಸುತ್ತಿ
ಹತ್ತಮಂದ್ಯಾಗ ಬರತಾನ । ದಾದಾಸಾಬ
ಬಿಳಿ ಅರಬಿ ಗುರತ ಹಿಡಿದೇವೋ ॥

೭

ಉಳ್ಳಾಗಡ್ಡಿಯ ಊರ ಗೊಳಸಂಗಿ ಜಾಹೀರ
ಹೊಂಟಾವ ಮೋಟಾರ ನೂರಾರು । ಬೆಂಗಳೂರ
ಹುಬ್ಬಳ್ಳಿ ದಾವಣಗೇರಿ ರಾಣಿಬೆನ್ನೂರ ॥

## ೨. ಭಾಗ್ಯವಂತ

ದಳವಾಯಿ ಮಲ್ಲಪ್ಪ ದೌಳಾಂವಾ ಪಡೆದಪ್ಪ
ಗೆಳೆಯರ ಬಳಗಕ್ಕ ಮುತ್ತಾದ । ಜತ್ತಾದ
ಗೊಳಸಂಗಿ ಗ್ರಾಮಕ್ಕ ಸ್ವತ್ತಾದ ॥

ಭೂದಾನ ಮಾಡ್ಯಾನ; ವಿದ್ಯೆಯ ನೀಡ್ಯಾನ
ಮಕ್ಕಳ ಬಾಳು ಬೆಳಗ್ಯಾನ । ಗುಣವಂತ
ಸಾಯುವ ತನಕ ಶ್ರಮಿಸ್ಯಾನ ॥

ಅಳುನುಂಗಿ ನಕ್ಕಾನ ; ಜನಸೇವೆ ಮಾಡ್ಯಾನ ।
ಮಂಡಳ ಪ್ರಧಾನ ಆಗ್ಯಾನ । ಧೀಮಂತ
ದೀಪದೆಣ್ಣ್ಯಾಗಿ ಬೆಳಗ್ಯಾನ ॥

ಸಾಹಿತಿಗಳ ಸಂಗದಲಿ ; ಹೆಜ್ಜೇನು ಸವಿದಾನ
ಮಾನ ಸನ್ಮಾನ ಮಾಡ್ಯಾನ । ಸಿಹಿಯೂಟ
ಉಣಿಸಿ ತೃಪ್ತಿ ಪಟ್ಟಾನ ।

ಹಸಿರುಕ್ರಾಂತಿಯ ; ಹರಿಕಾರ ಮಲ್ಲಣ್ಣ
ಹೊಸತಳಿಯ ಬೀಜ ಬಿತ್ತ್ಯಾನ । ನೆರೆ ಹೊರೆಯ
ರೈತರಿಗೆ ಮಾದರಿ ಆಗ್ಯಾನ ॥

ಮೋಸ ಮಾಡಿದವರಿಗೆ ; ದ್ವೇಷ ತಾ ಮಾಡದಲೆ.
ನಗನಗತ ಹಾಲು ಕುಡಿಸ್ಯಾನ । ಮಲ್ಲಣ್ಣ
ಕೆಡುಕಿಗೆ ಒಳಿತು ಬಯಸ್ಯಾನ ॥
ಜಾತೀಯತೆ ಮಾಡಲಿಲ್ಲ ; ನೀತಿ ಪಥ ಬಿಡಲಿಲ್ಲ
ದೀನದಲಿತರಿಗೆ ತಾಯಾಗಿ । ಎಲ್ಲರ
ನಾಲಿಗೆ ಮ್ಯಾಲ ನೆಲಸ್ಯಾನ

ಇದ್ದೂ ಸತ್ತಂತೆ ; ಬದುಕ್ಯಾರ ಬಹುಜನ
ಮಲ್ಲಪ್ಪ ಸಾಯಾಕ ಹುಟ್ಟಿಲ್ಲ । ರವಿಚಂದ್ರ
ಇರೂತನಕ ಈತ ಬದುಕ್ಯಾನ ॥

ಕಾ. ಹು. ಬಿಜಾಪೂರ / ೪೩

## ೩. ಎಲ್ಲಾರ ಮನದಾಗ ನೆಲಸ್ಯಾರ

ಮನಗೂಳಿಗೌಡರ ಮನಸು ಕನಸಂದರ
ಮಲ್ಲಿಗಿ ಸಂಪಿಗೆ ಮಕರಂದ । ಸೂಸಿದ
ನಾಡಿನ ತಂಬ ಘಮಘಮ ॥

ಮಾತು ಜೇನಿನ ಹನಿಯ ಗುಣವು ಚಿನ್ನದ ಗಣಿಯು
ಹೃದಯ ಹಾಲಿನ ಸವಿ ಕೆನೆಯು । ಬಾಳೆಲ್ಲ
ಅಪರಂಜಿಯಂಥ ತೆನೆತೆನೆಯು ॥

ಮನೆಗೆ ಬಂದವರಿಗೆ ಸ್ವಾಗತ ಕೋರ್ಯಾರ
ಉಟೋಪಚಾರ ಸಹಕಾರ । ನೊಂದವರ
ಬಂದ ಕೆಲಸ್ಯಕ ಶ್ರೀಕಾರ ॥

ಸಿಟ್ಟಿಲ್ಲ ಸೆಡುವಿಲ್ಲ ದ್ವೇಷ ದೂಷಣೆಯಿಲ್ಲ
ನಗಿಸುತ್ತ ತಾಯಿಹಾಂಗ ರಮಿಸುತ್ತ । ತಿಳಿ ಹೇಳಿ
ಸಮಸ್ಯೆಗೆ ಪರಿಹಾರಿ ನೀಡ್ಯಾರ ॥

ಬಿದ್ದವರ್ನ ಎಬ್ಬಿಸ್ಯಾರ ನೌಕರಿ ಕೊಡಿಸ್ಯಾರ
ಎಷ್ಟೋ ಮನೆತನ ಉದ್ಧಾರ । ಮಾಡ್ಯಾರ
ದೀಪ ಹಚ್ಚಿ ಜನ ನೆನಸ್ಯಾರ ॥
ಸೋಲರಿಯದ ಸರದಾರ ಕೈಕೊಟ್ಟ ಮತದಾರ
ರಾಜಕೀಯ ರಣರಂಗ ಘನಘೋರ । ಚಿತ್ರ ವಿಚಿತ್ರ
ಮಿತ್ರರು ಶತ್ರು ಆಗತಾರ ॥

ಎಲ್ಲರ ಹಿತ ಬಯಸ್ಯಾರ ಸಂಕಟ ಸೋಸ್ಯಾರ
ದಯೆ ಧರ್ಮದಿಂದ ಬದುಕ್ಯಾರ । ಕಡೆತನ
ಎಲ್ಲರ ಮನದಾಗ ನೆಲಸ್ಯಾರ॥

ಶಾಸಕರಾಗಿ ದುಡಿದಾರ ಸಚಿವ ಸ್ಥಾನ ಪಡೆದಾರ
ಅಭಿವೃದ್ಧಿ  ಕಾರ್ಯದ ಹರಿಕಾರ । ಕೈ ಬಾಯಿ
ಸ್ವಚ್ಛ ಇಟಗೊಂಡು ಮೆರದಾರ ॥

ಗೌಡರ ನೆನೆಯೋಣ ಉಪಕಾರ ಸ್ಮರಿಸೋಣ
ಅವರದಾರಿಲಿ ನಡೆಯೋಣ । ಭಕ್ತೀಲಿ
ಇಲ್ಲಿಂದ ಕೈಯ ಮುಗಿಯೋಣ ॥

## ೪. ಕಾ.ಹು. ಅವರ ವಂಶಾವಳಿ ಚಿತ್ರ

ರಜಬಲಿಸಾಬ ಬಿಜಾಪೂರ (ಅಜ್ಜ)

ಹುಸೇನಸಾಬ–ಷಹಜಾನಬಿ (ತಂದೆ–ತಾಯಿ)

ಪಟೇಲಸಾ ಸಾಹೇಬಿ ಆಶಾಬಿ ಕಾಸೀಮಸಾಬ–ಸಾಹೇಬಿ ಜಯರಾಬಿ ಮಾಬೂಬಿ ಮೌಲಾಲಿ

↓

ಮಹುಬೂಬಚಾಂದಬಿ ಪೀರಾನಬಿ– ಮಹಮ್ಮದಮೌಲಾ ಶರೀಪಾ–ಹುಸೇನಭಾಷಾ ಬಂದೇನವಾಜ ಮಮತಾಜಬೇಗಂ

ಹುಸೇನಭಾಷಾ ಸೈಫನಾಬ ತಾಯಬಅಲಿ ಶೌಕತಲಿ ಅಮಿನಾಬಿ ನೂರಅಲಿ

## ಕಾ.ಹು. ಅವರ ಭಾವ ಚಿತ್ರಗಳು



ಕರ್ನಾಟಕದ ಮಾಜಿ ಮುಖ್ಯಮಂತ್ರಿಗಳಾದ
ಶ್ರೀ ಎಸ್.ಎಂ.ಕೃಷ್ಣ ಅವರಿಂದ ರಾಜ್ಯೋತ್ಸವ ಪ್ರಶಸ್ತಿ ಸ್ವೀಕರಿಸುತ್ತಿರುವುದು



ರಾಜ್ಯೋತ್ಸವ ಪ್ರಶಸ್ತಿ ವಿಜೇತ 'ಜಾನಪದ ಜೀವಾಳ' ಶ್ರೀ ಕಾ.ಹು. ಬಿಜಾಪೂರ
ಅವರಿಗೆ ರೋಣಿಹಾಳದ ಶ್ರೀ ಸಂಗಮೇಶ ಬಾಗಲಕೋಟ ಅವರಿಂದ ಸನ್ಮಾನ.
ಮಾರ್ಚ-2003.




'ಶ್ರೀ ಕಾ.ಹು. ಬಿಜಾಪೂರ ಅವರನ್ನು ಡಾ.ಸಿ.ಎಸ್. ಹಿರೇಮಠ (ಎಸ್.ಎಂ.ಪಿ.) ಅವರು ಸನ್ಮಾನಿಸುತ್ತಿರುವುದು.




ಶ್ರೀ ಕಾ.ಹು. ಬಿಜಾಪೂರ ಅವರ ನಾಲ್ಕು ನಾಟಕಗಳನ್ನು ಪ್ರಯೋಗಿಸಿದ ಗೋಳಸಂಗಿಯ ಶ್ರೀ ಲಕ್ಷ್ಮೀವಿಲಾಸ ನಾಟ್ಯ ಸಂಘ ಹಾಗೂ ಶ್ರೀ ಭವಾನಿ ನಾಟ್ಯ ಸಂಘದ ಕಲಾವಿದರು ಹಾಗೂ ಊರಿನ ಗುರುಹಿರಿಯರ ಜೊತೆಗೆ ಕಾ.ಹು. ಬಿಜಾಪೂರ ಅವರು.



ಶ್ರೀ ಕಾ.ಹು. ಬಿಜಾಪೂರ ಅವರು ರಚಿಸಿ ಪ್ರಯೋಗಿಸಿದ 'ಮಕ್ಕಳೆರಡೇ ಇರಲಿ' ಏಕಾಂಕ ನಾಟಕದ ದೃಶ್ಯ



ಗದುಗಿನ ಪಂಚಾಕ್ಷರಿ ಗವಾಯಿಗಳ ನಾಟ್ಯ ಸಂಘದ 33 ಜನ ಕಲಾವಿದರಿಗೆ, ಗೊಳಸಂಗಿಯ ಜಾನಪದ ಪ್ರತಿಭಾ ಪ್ರಕಾಶನದಿಂದ ಶ್ರೀ ಶಿವಕುಮಾರ ಸ್ವಾಮಿಗಳ ಸಾನಿಧ್ಯ ಹಾಗೂ ಗುಬ್ಬಿ ವೀರಣ್ಣ ಪ್ರಶಸ್ತಿ ವಿಜೇತ ಮಂಡಲೀಕಪ್ಪ ಧುತ್ತರಗಿ ಅವರ ಅಧ್ಯಕ್ಷತೆಯಲ್ಲಿ ಆತ್ಮೀಯವಾಗಿ ಸನ್ಮಾನಿಸಲಾಯಿತು.



ಚಿತ್ತರಗಿ ಸಂಸ್ಥಾನಮಠ ಇಲಕಲ್ಲದಲ್ಲಿ ಶ್ರೀ ಕಾ.ಹು. ಬಿಜಾಪೂರ ಅವರು ಶಿವಾನುಭವ ಗೋಷ್ಠಿಯಲ್ಲಿ ಉಪನ್ಯಾಸ ನೀಡುತ್ತಿರುವುದು.




ಚಡಚಣದಲ್ಲಿ ಜರುಗಿದ ಗಡಿನಾಡು ಉತ್ಸವ ಹಾಗೂ ಜಿಲ್ಲಾ ಜಾನಪದ ಉತ್ಸವದಲ್ಲಿ ಶ್ರೀ ಕಾ.ಹು. ಬಿಜಾಪೂರ ಅವರು ಉಪನ್ಯಾಸ ನೀಡುತ್ತಿರುವುದು.




ಗೋಳಸಂಗಿಯಲ್ಲಿ ವಿಜಾಪೂರ ಜಿಲ್ಲಾ ಕಸಾಪ ಹಮ್ಮಿಕೊಂಡ ದತ್ತಿ ಉಪನ್ಯಾಸದಲ್ಲಿ ಶ್ರೀ ಕಾ.ಹು. ಬಿಜಾಪೂರ ಅವರು ಉಪನ್ಯಾಸ ನೀಡುತ್ತಿರುವುದು



ಬಿದರಕುಂದಿಯ ಶ್ರೀ ಶಿವಕುಮಾರ ಮಹಾಸ್ವಾಮಿಗಳು ಕಾ.ಹು. ಬಿಜಾಪೂರ ಅವರಿಗೆ 'ಭಾವೈಕ್ಯತೆಯ ಬಂಧು' ಬಿರುದನ್ನು ನೀಡಿ ಸನ್ಮಾನಿಸಿ, ಗೌರವಿಸಿದ್ದು.



ಬಸವನ ಬಾಗೇವಾಡಿ ತಾಲೂಕಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದ ಸಮಾರಂಭದಲ್ಲಿ ಸರ್ವಾಧ್ಯಕ್ಷರಾದ ಕಾ.ಹು. ಬಿಜಾಪೂರ ಹಾಗೂ ಬಾಳನಗೌಡ ಪಾಟೀಲ, ಶಾಸಕ ಬೆಳ್ಳುಬ್ಬಿ ಶ್ರೀ ಮುರುಗೇಂದ್ರ ಮಹಾಸ್ವಾಮಿಗಳು, ಮಾಜಿಸಚಿವ ಬಿ.ಎಸ್. ಪಾಟೀಲ (ಸಾಸನೂರ), ದಾನಪ್ಪ ಜತ್ತಿ,ಸಿದ್ದಣ್ಣ ಉತ್ನಾಳ, ಬಸಲಿಂಗಮ್ಮ ಕುಂಬಾರ.



ಬಸವನ ಬಾಗೇವಾಡಿ ಜರುಗಿದ ತಾಲೂಕಾ ದ್ವಿತೀಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷರಾದ ಕಾ.ಹು. ಬಿಜಾಪೂರ ಅವರ ಮೆರವಣಿಗೆಯ ದೃಶ್ಯ.